ಐಕ್ಯರಂಗ

ವಾರ ಪತ್ರಿಕೆ

ಭಾರತ ಕಮ್ಯೂನಿಸ್ಟ್ ಪಕ್ಷ [ಮಾರ್ಕ್ಸ್‌ವಾದಿ] ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 6 | ಸಂಚಿಕೆ 9 | ಫೆಬ್ರವರಿ 26, 1984 | ಬೆಲೆ 60 ಪೈಸೆ

ಪಂಜಾಬ್ - ಹರಿಯಾಣಕ್ಕೆ ಬೆಂಕಿ ಹತ್ತಿರುವಾಗ ಇಂದಿರಮ್ಮ ತುತ್ತೂರಿ ಊದುತ್ತಾರೆ

ರೋಮ್ ನಗರ ಉರಿಯುತ್ತಿದ್ದಾಗ ನೀರೋ ಸಾರಂಗ ಬಾರಿಸುತ್ತಿದ್ದಂತೆಯೇ ಪಂಜಾಬ್-ಹರಿಯಾಣ ಬೆಂಕಿಯಿಂದ ಉರಿಯುತ್ತಿರುವಾಗ, ನರಹತ್ಯೆ ನಡೆಯುತ್ತಿರುವಾಗ ಇಂದಿರಾ ಗಾಂಧಿ, ದೇಶದ ಪ್ರಧಾನಿ ತುತ್ತೂರಿ ಊದುತ್ತಿರುವುದು ಅತ್ಯಂತ ನಾಚಿಕೆಗೇಡಿನ ವರ್ತನೆ.

ತಮಗೆ ಸಂಬಂಧ ಪಟ್ಟ ಖಾತೆಯ ಕುರಿತು ಲೋಕಸಭೆ ಸದಸ್ಯರ ಜೊತೆಯಲ್ಲಿ ಚರ್ಚೆಮಾಡುತ್ತ (ತಾ-23 ರಂದು) ಕಾಶ್ಮೀರದಲ್ಲಿ ತನ್ನ ಪಕ್ಷದ ಕಾಂಗ್ರೆ ಜನರ ಕೊಲೆ ನಡೆಯುತ್ತಿರುವುದನ್ನು ತೀವ್ರ ಖಂಡಿಸುತ್ತೇನೆಂಬ ಉದ್ಗಾರ ತೆಗೆದರಲ್ಲದೆ, ಪಂಜಾಬ ಹರಿಯಾಣಗಳಲ್ಲಿ ಕಳೆದ ಕೆಲವು ದಿವಸಗಳಿಂದ ಹಾಡೇಹಗಲು ನಿರಪರಾಧಿಗಳ ಕೊಲೆ, ಸುಲಿಗೆ ಯಾಗುವುದನ್ನು ಖಂಡಿಸಲು, ಅವರಿಗೆಲ್ಲ ಸಂತಾಪ ಸೂಚಿಸಲು ಔದಾರ್ಯ ತೋರಿಸಲಿಲ್ಲ. ಯಾಕೆಂದರೆ ಹರಿಯಾಣ-ಪಂಜಾಬ್ ಕಾಂಗ್ರೆಸ್ ಆಡಳಿತೆಗೊಳಪಟ್ಟಿದೆ. ಅಲ್ಲಿ ಕಾಯಿದೆ ಕಾನೂನು ಸಂಪೂರ್ಣ ಕುಸಿದು ಬಿದ್ದು ನರಹತ್ಯೆ ಮುಂದುವರಿಯುತ್ತಿರುವಾಗ, ಆಸ್ತಿಗಳೆಲ್ಲ ಬೆಂಕಿಗಾಹುತಿಯಾಗುತ್ತಿರುವಾಗ ಇಂದಿರಮ್ಮನ ಕಲ್ಲಿನ ಹೃದಯ ಕರಗುತ್ತಿಲ್ಲ. ಆದರೆ ಜಮ್ಮು ಕಾಶ್ಮೀರದಲ್ಲಿ ಕಾಂಗ್ರೆಸ್ಸಿನವರೇ ಕಾನೂನು ಭಂಗ ಕಾರ್ಯದಲ್ಲಿ ತೊಡಗಿದಾಗ ಅಕಸ್ಮಾತ್ ಅಸು ನೀಗಿದ್ದಕ್ಕೆ ಅಮ್ಮನವರ ಆಕ್ರೋಶ ಗಗನಕ್ಕೇರುತ್ತದೆ. ದೇಶದ ಸಮಗ್ರತೆಯನ್ನು ಬಿಟ್ಟುಕೊಟ್ಟು ಛಿದ್ರಕಾರಿ ಶಕ್ತಿಗಳಿಗೆ ಪ್ರೋತ್ಸಾಹ ನೀಡುವ ನೀತಿಯನ್ನು ಇಂದಿರಾ ಗಾಂಧಿ ಅನುಸರಿಸುತ್ತಿರುವುದರಿಂದಲೇ ಹೀಗಾಗುತ್ತಿದೆ.

ಪೂಜಾಸ್ಥಳಗಳಿಗೆ ಬೆಂಕಿ, ಕೇಂದ್ರ ಪೋಲೀಸ್ ಪಡೆಯ ಮೇಲೆ ಬಾಂಬ್ ಎಸೆತ, ಮೋಟರ್ ಸೈಕಲ್ ಸವಾರರಿಂದ ನಿರಪರಾಧಿಗಳ ಕೊಲೆ ಇವು ದಿನ ನಿತ್ಯದ ಘಟನೆ.

ಕುರುಕ್ಷೇತ್ರ, ಪಾಣಿಪತ್, ಕರ್ನಾಲ್, ಅಮೃತಸರ್, ಪಾಟಿಯಾಲ, ಲೂಧಿಯಾನ ಹರ್ಯಾಣಾ ಹೀಗೆ ಎರಡೂ ರಾಜ್ಯದ ಪ್ರಮುಖ ನಗರಗಳಲ್ಲಿ ಹಿಂದೂ-ಸಿಖ್ ಜಾತಿಗಳೊಳಗೆ ಭೀಕರ ಕದನವೇ ನಡೆದಿದೆ. ಬೆಂಕಿ, ಲೂಟಿ, ಹತ್ಯಾಕಾಂಡ ಸತತವಾಗಿ ನಡೆದಿದ್ದರೂ ಹರ್ಯಾಣಾದ ಮುಖ್ಯ ಮಂತ್ರಿಯಾಗಲೀ, ಪಂಜಾಬಿನ ಗವರ್ನರರಾಗಲೀ, ಪ್ರಧಾನಿ ಇಂದಿರಾ ಗಾಂಧಿಯವರಾಗಲೀ ಚಿಂತೆಗೊಳಗಾಗಿಲ್ಲ.

ಇಷ್ಟು ದಿವಸ ಅಕಾಲಿಗಳು ತಮ್ಮ ಬೇಡಿಕೆಗಳಿಗಾಗಿ ಕೇಂದ್ರ ಸರಕಾರದ ವಿರುದ್ಧ ಹೋರಾಡುತ್ತಿದ್ದು, ಈಗ ಅದು ಹಿಂದೂ-ಸಿಖ್ ಪ್ರಶ್ನೆಯಾಗಿ ಪರಿವರ್ತಿಸಲ್ಪಟ್ಟಿರುವುದು ಅತ್ಯಂತ ದುರದೃಷ್ಟಕರ. ಜನತೆ ಎದುರಿಸುತ್ತಿರುವ ಸಮಸ್ಯೆಗಳಿಗೆ ಪರಿಹಾರ ಕಂಡುಹಿಡಿಯುವಲ್ಲಿ ಕೇಂದ್ರ ಸರಕಾರ ವಿಫಲಗೊಂಡಿರುವುದರಿಂದಲೇ ಅಸ್ಸಾಂನಂತೆಯೇ ಹರಿಯಾಣ ಪಂಜಾಬ್ ಸಮಸ್ಯೆಗಳೂ ನೆನೆಗುದಿಗೆ ಬಿದ್ದು ಹಿಂಸೆ ಅತ್ಯಾಚಾರಗಳಿಗೆ, ಅಶಾಂತಿಗೆ ಎಡೆ ಮಾಡಿ ಕೊಟ್ಟಿದೆ.

ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷ ಹಾಗೆಯೇ ಇತರ ಪ್ರಜ್ಞಾವಂತ ಜನರು ಈ ಎರಡು ರಾಜ್ಯಗಳ ತಂಟೆಯ ವಿಷಯವನ್ನು ಶಾಂತ ರೀತಿಯಿಂದ ಬಗೆಹರಿಸಬೇಕೆಂದು ಒತ್ತಾಯಿಸುತ್ತಾ ಬಂದಿದ್ದಾರೆ. ತನ್ನ ಪಕ್ಷದ ಹಿತವೇ ಪ್ರಾಧಾನ್ಯವೆನ್ನುತ್ತಿರುವ ಇಂದಿರಾ ಗಾಂಧಿಯ ನಿಲುವಿನಿಂದಾಗಿ ಸಿಖ್-ಹಿಂದೂ ಜಾತಿಗಳ ಉಗ್ರಗಾಮಿಗಳು ಚಳುವಳಿಯ ಲಾಭ ಪಡೆಯುತ್ತಿದ್ದಾರೆ.

ಸಿಪಿಐ(ಎಂ)ನ ಪಾಲಿಟ್ ಬ್ಯೂರೋ ಸದಸ್ಯರಾದ ಹರಿಕಿಶನ್ ಸಿಂಗ್ ಸುರ್‌ಜಿತ್ ಅವರು ಫೆ. 20 ರಂದು ಇಂದಿರಾ ಗಾಂಧಿಗೆ ಬರೆದ ಪತ್ರದಲ್ಲಿ 1981 ರಿಂದಲೂ ಹಿಂದೂ. ಸಿಖ್ ಜಾತೀವಾದಿಗಳೂ, ಉಗ್ರಗಾಮಿಗಳೂ ಜಾತೀಯ ದ್ವೇಷದ ವಿಷಪೂರಿತ ಪ್ರಚಾರ ನಡೆಸುತ್ತಿದ್ದರೂ ಕೂಡ, ಪಂಜಾಬಿನ ಹಿಂದೂ-ಸಿಖ್ ಜನರೆಲ್ಲ ಉಗ್ರಗಾಮಿಗಳ ಪ್ರಚಾರಕ್ಕೆ ಬಲಿಯಾಗದೆ, ಸಿಪಿಐ (ಎಂ), ಜನತಾ, ಕಾಂಗ್ರೆಸ್ (ಎಸ್) ಸಿ. ಪಿ. ಐ. ಪಕ್ಷಗಳು ಇತ್ತೀಚಿಗೆ ರಾಜ್ಯಾದ್ಯಂತ ನಡೆದ ಸಭೆ, ಪ್ರದರ್ಶನಗಳಲ್ಲಿ ಸಾವಿರಾರು ಸಂಖ್ಯೆಯಲ್ಲಿ ಭಾಗವಹಿಸಿ, ಜಾತೀವಾದಿಗಳನ್ನೂ, ಉಗ್ರಗಾಮಿಗಳನ್ನೂ ವಿರೋಧಿಸುವಲ್ಲಿ ಯಶಸ್ವಿಯಾಗಿದ್ದಾರೆಂದೂ, ಆದರೆ ಹರಿಯಾಣಾದ ಮುಖ್ಯಮಂತ್ರಿ, ಭಜನ್ ಲಾಲ್ ಸಮಸ್ಯೆಯ ಗಾಂಭೀರ್ಯವನ್ನು ಅರಿತುಕೊಳ್ಳದೆ, "ಎಲ್ಲ ಶಾಂತವಾಗಿದೆ" ಎಂಬ ಹೇಳಿಕೆಗಳನ್ನು ನೀಡಿ ಹಿಂಸಾಕೃತ್ಯಗಳಿಗೆ ಪ್ರಚೋದನೆ ನೀಡುತ್ತಿದ್ದಾರೆಂದೂ ಆರೋಪ ಹೊರಿಸಿದ್ದಾರೆ. ಅದೇ ಪತ್ರದಲ್ಲಿ ಸುರ್‌ಜಿತ್ ಅವರು 1947 ರ ಪೂರ್ವದಲ್ಲಿ ಜಾತೀಯ ದಂಗೆ ನಡೆಯುತ್ತಿದ್ದಾಗ ಅಧಿಕಾರಿಗಳು ದಂಗೆ ಕೋರರ ಜೊತೆ ಸೇರಿ ಪರಿಸ್ಥಿತಿ ಉಲ್ಬಣಗೊಳ್ಳುವಂತೆ ಮಾಡುತ್ತಿದ್ದ ಸಂಗತಿಯನ್ನು ಇಂದಿರಾ ಗಾಂಧಿಗೆ ನೆನಪು ಮಾಡಿಕೊಟ್ಟು, ಎಲ್ಲ ವಿರೋಧ ಪಕ್ಷಗಳು, ಕಳೆದ 3 ವರ್ಷಗಳಿಂದಲೂ ಸಮಾಜ ದ್ರೋಹಿಗಳನ್ನೂ ಜಾತೀವಾದಿಗಳನ್ನೂ ವಿರೋಧಿಸುತ್ತ ಬಂದಿರುವಾಗ ಅಧಿಕಾರಿಗಳ, ಆಡಳಿತೆಯ ಕೈವಾಡದಿಂದ ಸಮಾಜ ದ್ರೋಹಿ ಚಟುವಟಿಕೆ ಅಪಾಯಕಾರಿ ಹಂತ ತಲ್ಪಿರುವುದರ ಕಡೆ ಗಮನ ಸೆಳೆದಿದ್ದಾರೆ. ದೇಶಪ್ರೇಮ ಮತ್ತು ಜಾತ್ಯಾತೀತತೆಯ ಧ್ವಜ ಎತ್ತಿ ಹಿಡಿಯಲು ಈಗ ಪಂಜಾಬಿನಲ್ಲಿ ಹೆಚ್ಚು ಜನ ಉಳಿದಿಲ್ಲೆಂದೂ, ತನ್ನ ಪಕ್ಷದ ಬಹಳಷ್ಟು ಕಾರ್ಯಕರ್ತರು ಈ ದುಷ್ಟ ಶಕ್ತಿಯ ವಿರುದ್ಧ ಹೋರಾಡಿ ಪ್ರಾಣ ತ್ಯಾಗ ಮಾಡಿರುವ ಸಂಗತಿ ಹೆಮ್ಮೆಯ ವಿಷಯವಾಗಿದೆಂದು ತಿಳಿಸಿದ್ದಾರೆ.

ಜಾತೀಯತೆಯ ಬೆಂಕಿ ಇತರ ರಾಜ್ಯಗಳಿಗೂ ಪ್ರಸರುವ ಸಂಭವವಿರುವುದರಿಂದ ಇಂಥ ಶಕ್ತಿಗಳನ್ನು ದಮನ ಮಾಡಲು ಕೂಡಲೇ ಕಠೋರ ಕ್ರಮ ಕೈಗೊಳ್ಳಬೇಕೆಂದು ಪತ್ರದ ಕೊನೆಯಲ್ಲಿ ಸುರ್‌ಜಿತ್ ಅವರು ಇಂದಿರಾ ಗಾಂಧಿಯವರನ್ನು ವಿನಂತಿಸಿದ್ದಾರೆ.

ರಾಷ್ಟ್ರದ ಶತ್ರುಗಳು, ಪಂಜಾಬ್ ಮತ್ತು ಹರ್ಯಾಣದಲ್ಲಿ ನಡೆಸುತ್ತಿರುವ ವಿಧ್ವಂಸಕ ಕೃತ್ಯಗಳನ್ನು ನಿಲ್ಲಿಸಲು ಎಲ್ಲ ಪ್ರಜಾಪ್ರಭುತ್ವ ಶಕ್ತಿಗಳೂ, ರಾಜಕೀಯ ಪಕ್ಷಗಳೂ ಜನತೆಯನ್ನು ಹುರಿದೆಬ್ಬಿಸಿ ಹೋರಾಡಬೇಕೆಂದು ಸಿಪಿಐ (ಎಂ) ಕರೆ ಕೊಟ್ಟಿದೆ.

ಇನ್ನೂ ಹೆಚ್ಚು ಸುಧಾರಿಸಬೇಕಾಗಿದ್ದ ಹೆಗಡೆ ಸರಕಾರದ ಮುಂಗಡ ಪತ್ರ

ಹೊಸ ಕರಗಳ ಮೂಲಕ ರೂ. 87 ಕೋಟಿ ಆದಾಯ ತಂದರೂ, ರೂ. 189-60 ಕೋಟಿ ಕೊರತೆಯ ಮುಂಗಡ ಪತ್ರವನ್ನು ಅರ್ಥಿಕ ಖಾತೆಯನ್ನು ಹೊಂದಿದ ರಾಜ್ಯದ ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆಯವರು ವಿಧಾನ ಸಭೆಯಲ್ಲಿ ಮಂಡಿಸಿದ್ದಾರೆ.

ಕಂದಾಯ ಮತ್ತು ಬಂಡವಾಳ ಬಾಬತ್ತು ರೂ. 2230-17 ಕೋಟಿ ಆದಾಯ ತೋರಿಸಲಾಗಿದೆ. ಆದರೆ ಕಂದಾಯ ಬಾಬತ್ತು ವೆಚ್ಚ ರೂ. 1733-34 ಕೋಟಿ, ಬಂಡವಾಳದ ಸಲುವಾಗಿ ವೆಚ್ಚ ರೂ. 647-55 ಕೋಟಿ ಇರುವುದರಿಂದ ಇವೆರಡೂ ಸೇರಿ ರೂ. 2480-89 ಕೋಟಿ ಆಗುವುದರಿಂದ ರೂ. 149-72 ಕೋಟಿ ಕೊರತೆ ಉಂಟಾಗುತ್ತದೆ. ಇದಕ್ಕೆ ಹೋದ ವರ್ಷದ ಕೊರತೆ ರೂ. 119-80 ಕೋಟಿ ಸೇರಿಸಿದರೆ ರೂ 269-60 ಕೋಟಿಯಾಗುತ್ತದೆ. ಹೊಸ ಕರಗಳಿಂದ ರೂ. 87 ಕೋಟಿ ಆದಾಯ ಬರಲಿದ್ದು ಕೊರತೆ ರೂ. 182-60 ಕೋಟಿಯಾಗುತ್ತದೆ.

ಕೇಂದ್ರದಲ್ಲಿ ಹಿರಿಬಂಡವಾಳ-ಭೂ ಮಾಲಿಕ ವರ್ಗದ ಸರಕಾರ ಅಸ್ತಿತ್ವದಲ್ಲಿರುವಾಗ, ತಾನು ಸಂಗ್ರಹಿಸುತ್ತಿರುವ ಒಟ್ಟು ಸಂಪನ್ಮೂಲಗಳಲ್ಲಿ ರಾಜ್ಯ ಸರಕಾರಗಳಿಗೆ ಸಲ್ಲತಕ್ಕ ಪಾಲನ್ನು ಒದಗಿಸದಿರುವಾಗ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಾರ್ಟಿಯನ್ನೊಳಗೊಂಡು ಯಾವುದೇ ವಿರೋಧ ಪಕ್ಷದ ರಾಜ್ಯ ಸರಕಾರ ಜನರ ಆಶೋತ್ತರಗಳನ್ನು ಪೂರೈಸುವ ಮುಂಗಡ ಪತ್ರ ತಯಾರಿಸುವುದು ಬಹಳ ಕಷ್ಟ. ರಾಜ್ಯಗಳಿಗೆ ಸಲ್ಲತಕ್ಕ ಆದಾಯವನ್ನು ಸಂದಾಯ ಮಾಡಲು ಕೇಂದ್ರ ಸರಕಾರ ನಿರಾಕರಿಸುತ್ತಿರುವುದರಿಂದ ರಾಜ್ಯ ಸರಕಾರಗಳು ಆರ್ಥಿಕ ಬಿಕ್ಕಟ್ಟನ್ನೆದುರಿಸಬೇಕಾಗಿದೆಯೆಂದು ಮುಂಗಡ ಪತ್ರವನ್ನು ಮಂಡಿಸುವಾಗಲೇ ರಾಮಕೃಷ್ಣ ಹೆಗಡೆಯವರು ಹೇಳಿದ್ದಾರೆ. ಕರ ಹಾಗೂ ಪರಿಹಾರಗಳಲ್ಲಿ ಹಾಗೆಯೇ ಸಾಲ ಪಾವತಿ ಪರಿಹಾರದಲ್ಲಿ ಕೇಂದ್ರ ಸರಕಾರ ರಾಜ್ಯಕ್ಕೆ ನ್ಯಾಯವಾದ ಪಾಲುಕೊಡಲೆಂದು ಆಗ್ರಹಪಡಿಸಿದ್ದಾರೆ. ಇದಕ್ಕೆ ಉದಾಹರಣೆ ನೀಡುತ್ತಾ ಆರನೆಯ ಯೋಜನೆಗಾಗಿ ಭಾರತ ಸರಕಾರ ಪೇಟೆಯಲ್ಲಿ ಎತ್ತಿದ ಸಾಲ ರೂ 15,000 ಕೋಟಿಯಾದರೆ ಎಲ್ಲ ರಾಜ್ಯಗಳು ಸೇರಿ ರೂ. 4580 ಕೋಟಿ ಮಾತ್ರ ಸಾಲ ಸಂಗ್ರಹಿಸಿವೆ ರಾಜ್ಯ ಯೋಜನೆಗಳ ಗಾತ್ರದಲ್ಲಿಯ ಹೆಚ್ಚಳಕ್ಕೆ ಅನುಗುಣವಾಗಿ ಅವುಗಳಿಗೆ ಕೇಂದ್ರದ ಸಹಾಯ ಹೆಚ್ಚಾಗುವುದರ ಅಗತ್ಯ ಒತ್ತಿ ಹೇಳಿದ್ದಾರೆ. ಈ ಕಾರಣದಿಂದಾಗಿ 1983-84 ರಲ್ಲಿ ರಾಜ್ಯವು ಕೇಂದ್ರದಿಂದ ಪಡೆದ ಸಾಲದ ಪ್ರತಿ ನೂರು ರೂ. ಗಳಲ್ಲಿ ರೂ 70 ಸಾಲ ಮರು ಪಾವತಿಗೆ ಮರಳಿ ಹೋಗಿ ಬಂಡವಾಳ ತೊಡಗಿಸುವುದಕ್ಕೆ ರಾಜ್ಯದ ಹತ್ತಿರ ಉಳಿದಿರುವುದು ಬರೀ ರೂ 30 ಮಾತ್ರ ಎಂದೂ ದೂರಿದ್ದಾರೆ.

ಕೇಂದ್ರ ಸರಕಾರದ ಇಂಥ ಆರ್ಥಿಕ ನೀತಿಯಿಂದಾಗಿ ಪ್ರತಿ ರಾಜ್ಯ ಸರಕಾರಗಳೂ ತಂತಮ್ಮ ಆದಾಯ ಮತ್ತು ಖರ್ಚನ್ನು ಹೊಂದಿಸಿಕೊಳ್ಳುವುದು ಬಹಳ ಕಷ್ಟಕರವಾಗಿದೆ ಎಂಬುದೇನೋ ನಿಜ. ಆದ್ದರಿಂದ ಒಟ್ಟಾರೆ ನೋಡಿದರೆ ಈ ಬಜೆಟ್ಟನ್ನು ಕೆಲವು ದೃಷ್ಟಿಯಲ್ಲಿ ಸ್ವಾಗತಿಸಬಹುದು

ಹೊಸ ವರ್ಷದ ಮುಂಗಡ ಪತ್ರವನ್ನು ಮಂಡಿಸುವಾಗ ಹಿಂದಿನ ವರ್ಷದ ಮುಂಗಡ ಪತ್ರದಲ್ಲಿ ನಮೂದಿಸಿದ್ದಂತೆ ಆದಾಯ ವಸೂಲಿ ಎಷ್ಟು, ಅಭಿವೃದ್ಧಿ ಕಾರ್ಯಕ್ರಮಗಳ ಪ್ರಗತಿ ಏನಾಗಿದೆ, ಎಷ್ಟು ಹಣ ಖರ್ಚಾಗಿದೆ, ಇಂಥ ಕೆಲಸಗಳ ಸಲುವಾಗಿ ಮೀಸಲಾಗಿಟ್ಟ ಹಣ ಖರ್ಚಾಗದಿರಲು ಕಾರಣವೇನು, ಇಂಥ ಸಮಸ್ಯೆಗಳ ಪರಿಹಾರಕ್ಕೆ ಹೊಸ ಬಜೆಟ್ಟಿನಲ್ಲಿ ಸೂಚನೆಗಳೇನೆಂಬ ಅಂಶ ವಿಶದೀಕರಿಸುವುದು ಅಗತ್ಯ. ಇಂಥ ಒಂದು ವರದಿ ತಯಾರಾಗದಿರುವುದು ಆಡಳಿತೆಯ ಕೊರತೆಯೇ ಸರಿ.

ಜನಹಿತ ನಿಲುವು :-

ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಾರ್ಟಿಯ ಹಲವಾರು ವರ್ಷಗಳ ಬೇಡಿಕೆಯಾದ ಆಹಾರ ಧಾನ್ಯಗಳ ಮೇಲಿನ ತೆರಿಗೆ ವಿನಾಯತಿಯಲ್ಲಿ, ರಾಗಿ, ಜೋಳದ ಮೇಲಿನ ಕರ ಪೂರ್ಣ ವಿನಾಯತಿಯಾಗಿರುವುದು, ಹಾಗೆಯೇ, ಧಾನ್ಯ, ಕಾಳು, ಬೇಳೆ, ಎಣ್ಣೆ, ಮೆಣಸಿನ ಕಾಯಿ ಮೊದಲಾದವುಗಳ ಮೇಲಿನ ತೆರಿಗೆ ಕಡಿಮೆ ಯಾಗಿರುವುದೂ ಸ್ವಾಗತಾರ್ಹ.

21 ಸರಕುಗಳನ್ನು ಏಕ ಹಂತ ತೆರಿಗೆ ವಿಧಾನಕ್ಕೆ ಒಳಪಡಿಸಿರುವುದು ಸ್ವಾಗತಾರ್ಹ. ಹಾಗೆಯೇ ಭೂ ಹೀನ ಕೃಷಿ ಕಾರ್ಮಿಕ ಮಹಿಳೆಯರಿಗೆ 3 ತಿಂಗಳ ಕಾಲ ರೂ 50 ರಂತೆ ಹೆರಿಗೆ ಭತ್ಯೆ ಕೊಡುವ ನಿರ್ಣಯವೂ ಸ್ವಾಗತಾರ್ಹ.

(8 ನೇ ಪುಟ ನೋಡಿ)

ಕರ್ನಾಟಕ ರಾಜ್ಯದಲ್ಲಿ

ಯಾರಪ್ಪನ ಹಣ ಹಂಚುತ್ತೀರಿ ಪೂಜಾರಿಯವರೇ ?

ಕಳೆದ 4 ವರ್ಷಗಳಿಂದ ಕೇಂದ್ರದಲ್ಲಿ ಅರ್ಥ ಮಂತ್ರಿ ಯಾಗಿದ್ದರೂ ಕೂಡ ತನ್ನ ಚಾಣಾಕ್ಷ ಮೆದುಳಿಗೆ ಹೊಳೆಯದ "ಬಡವರ ಉದ್ಧಾರದ" ತಂತ್ರವನ್ನು ತನ್ನ ಹೊಸ ಗುರು ರಾಜೀವ ದೀಕ್ಷೆಯಲ್ಲಿ ಸಿದ್ಧಮಾಡಿಯೇ ತೋರಿಸಿದಾಗ ಆ ಕ್ಷಣವೇ ಸಿದ್ಧಿ ಪಡೆದ ಮಂಗಳೂರು ಪೂಜಾರಿ ಕರ್ನಾಟಕ ರಾಜ್ಯಾದ್ಯಂತ ರಾಜೀವ ತಂತ್ರವನ್ನು ಪ್ರಯೋಗಿಸಲು ಹೊರಟಿದ್ದಾರೆ. ಈ ಸಂದರ್ಭಗಳಲ್ಲಿ ಬ್ಯಾಂಕಿನ ಅಧಿಕಾರಿಗಳನ್ನೂ ನೌಕರದಾರರನ್ನೂ ಅತ್ಯಂತ ಕೀಳ್ಮಟ್ಟದ ಭಾಷೆಯಲ್ಲಿ ಬೈದು ತರಾಟೆಗೆ ತೆಗೆದುಕೊಂಡಿದ್ದಾರೆ. ಸಾರ್ವಜನಿಕವಾಗಿಯೇ ಮ್ಯಾನೇಜರುಗಳು ಕ್ಷಮೆಕೇಳುವಂತೆ ಮಾಡಿದ್ದಾರೆ ಬ್ಯಾಂಕ್ ನೌಕರದಾರರೂ ಬ್ಯಾಂಕ್ ಅಧಿಕಾರಿಗಳ ಸಂಘಗಳೂ, ಜನಾರ್ಧನ ಪೂಜಾರಿಯವರ ವರ್ತನೆ ಹೇಳಿಕೆಗಳನ್ನು ಖಂಡಿಸಿದ್ದಾರೆ. ಪೂಜಾರಿಯವರ ಅನಾಗರೀಕ, ಅಸಭ್ಯ ವರ್ತನೆ, ಹೇಳಿಕೆಗಳು ಖಂಡನೀಯ, ಹಾಗೆಯೇ ಯಾವ ಜಾಮೀನುಗಳಿಲ್ಲದೆ ಬ್ಯಾಂಕ್ ಹಣ ಸಾಲರೂಪದಲ್ಲಿ ವಿತರಣೆ ಮಾಡಬೇಕೆಂಬ ನಿಲುವು ಕೂಡ ಸಮರ್ಥನೀಯವಲ್ಲ.

ಬ್ಯಾಂಕ್ ರಾಷ್ಟ್ರೀಕರಣವಾಗಿ ಬಡ, ಮಧ್ಯಮ ವರ್ಗದವರಿಗೆ ಅದರ ಲಾಭ ಸಿಗಬೇಕೆಂದು ಹೋರಾಟ ಮಾಡಿದವರು ಕಮ್ಯೂನಿಸ್ಟ್ ಪಾರ್ಟಿ. ದೊಡ್ಡ ಕಾರ್ಖಾನೆದಾರರು ಬ್ಯಾಂಕುಗಳಿಂದ ಹಣ ಪಡೆದು ಮೋಸ ಮಾಡುತ್ತಿದ್ದಾರೆ, ಹಣ ಮುಳುಗಿಸುತ್ತಾರೆಂಬ ಆರೋಪ ಮಾಡಿದವರೂ ಅವರೇ. ಬ್ಯಾಂಕು ರಾಷ್ಟ್ರೀಕರಣವಾದ ನಂತರ ರೂ 25,000 ಕೋಟಿ ಉದ್ಯಮಿಗಳು ತಿಂದು ಹಾಕಿದ್ದಾರೆಂದು ಇತ್ತೀಚಿನ ವರದಿ ತೋರಿಸಿದೆ. ಹಾಗೆಯೇ ತುರ್ತು ಪರಿಸ್ಥಿತಿಯಲ್ಲಿ ಹಾಗೆಯೇ ಅನಂತರದ ವರ್ಷಗಳಲ್ಲಿ ಬಡವರೆಂದು ಹೇಳಿಕೊಳ್ಳುವರಿಗೆ ರೂ 500 ರಿಂದ ರೂ 5000 ವರೆಗೆ ಕೊಟ್ಟ ಸಾಲದಲ್ಲಿ ಹೆಚ್ಚಿನಂಶ ವಸೂಲಿಯಾಗಿಲ್ಲ, ಆಗುತ್ತಿಲ್ಲ, ಆಗಲು ಸಾಧ್ಯವಿಲ್ಲೆಂಬ ವಿಷಯವೂ ಗೊತ್ತು.

ಬ್ಯಾಂಕುಗಳಲ್ಲಿರುವ ಹಣ ಇಂದಿರಾ ಗಾಂಧಿ, .. ಜನಾರ್ಧನ ಪೂಜಾರಿಗಳದಲ್ಲ. ಸಾರ್ವಜನಿಕರು ತಮ್ಮ ಸಂಪಾದನೆಯಿಂದ ಉಳಿತಾಯ ಮಾಡಿಟ್ಟಿರುವ ಹಣ. ದೇಶದ ಅಭಿವೃದ್ಧಿಗೆ ಅದು ಉಪಯೋಗವಾಗಬೇಕು, ಅದರಿಂದ ತನ್ನ ಅಭಿವೃದ್ಧಿಯೂ ಆಗುತ್ತದೆಂದು ಜನರು ತಿಳಿದಿದ್ದಾರೆ. ಜನೋಪಯೋಗಿ ಕಾರ್ಯಕ್ರಮಗಳಿಗೆ, ಉತ್ಪತ್ತಿಗೆ, ನಿರುದ್ಯೋಗ ನಿವಾರಣೆಗೆ, ಸ್ವಂತ ಉದ್ಯೋಗಕ್ಕೆ ಬ್ಯಾಂಕ್ ಹಣ ಉಪಯೋಗವಾದರೆ ಮಾತ್ರ ಅದು ಸಾರ್ಥಕ.

"ಪ್ರಧಾನಿ ಇಂದಿರಾ ಅವರು ಆದೇಶ ನೀಡಿದ ಫಲವಾಗಿ ಒಡಜನರು ಬ್ಯಾಂಕ್ ಸೌಲಭ್ಯಗಳನ್ನು ಹೊಂದಿ ಬಡತನ ರೇಖೆಯಿಂದ ಮೇಲೆ ಬಂದಿದ್ದಾರೆ" ಎಂದು ಜನಾರ್ಧನ ಪೂಜಾರಿಯವರು ಕಾರವಾರದಲ್ಲಿ ಸಾಲವಿತರಣೆ ಮಾಡುವಾಗ ಬೆನ್ನು ಚಪ್ಪರಿಸಿಗೊಂಡರು. ಆದರೆ ಪೂಜಾರಿಯವರ ಕೇಂದ್ರ ಸರಕಾರದ ವರದಿ ಪ್ರಕಾರನೇ ಬಡತನದ ರೇಖೆಗಿಂತ ಕೆಳಗಿದ್ದವರ ಸಂಖ್ಯೆಯೇ ಹೆಚ್ಚಾಗುತ್ತಿದೆಂದು ಸಾರಿರುವುದರಿಂದ ಕಲಿಯುಗದ ದಾನಶೂರ ಪೂಜಾರಿಯವರ ಹೇಳಿಕೆ ಸತ್ಯಕ್ಕೆ ದೂರವಾಗಿದೆ. ಬಡತನದ ರೇಖೆಯಿಂದ ಮೇಲೆ ಬಂದವರ ಅಂಕೆ ಸಂಖ್ಯೆಯನ್ನು ಪೂಜಾರಿಯವರು ತಿಳಿಸುತ್ತಾರೆಯೇ. ?

ತುಂಟ ಮಕ್ಕಳಿಗೆ ಅಮ್ಮನ ಕಿವಿಮಾತು

"ಭಿನ್ನಾಭಿಪ್ರಾಯಗಳನ್ನು ಮರೆತು ಸಂಘಟಿತರಾಗಿ ಜನಸೇವೆಯಲ್ಲಿ ತೊಡಗಿರಿ" ಎಂಬ ಬುದ್ಧಿಮಾತು ಹೇಳಿದವರು ಇಂದಿರಾ ಗಾಂಧಿ. ಅಧಿಕಾರದ ಕುರ್ಚಿಗಾಗಿ ಹನ್ನೆರಡು ತಿಂಗಳು ಕುಸ್ತಿಯಾಡಿ ದಣಿದು ತೇಗಾಡುತ್ತಿದ್ದ ವೀರಪ್ಪ ಮೊಯಿಲಿ, ಕೆ. ಎಚ್. ಪಾಟೀಲರಂಥ ರಾಜ್ಯದ ಕಾಂಗ್ರೆಸ್ ಪುಢಾರಿಗಳು ಈ ಬುದ್ಧಿವಾದದ ಮಾತುಗಳನ್ನು ಕೇಳಿಸಿಕೊಂಡವರು, ತುಂಟ ಹುಡುಗರು ತುಂಟತನವನ್ನು ಬಿಡುವುದೇ ಇಲ್ಲೆಂದು ಖಾತ್ರಿಯಾದ ಅಮ್ಮನವರೂ "ಲೋಕಸಭೆ ಚುನಾವಣೆ ಸಾರುತ್ತೇನೆ. ಚುನಾವಣೆ ಮುಗಿಯುವ ತನಕವಾದರೂ ಜಗಳಾಡುವುದನ್ನು ಬಿಟ್ಟು ಬಿಡಿರಪ್ಪಾ" ಎಂದು ದುಂಬಾಲು ಬಿದ್ದು ಕೇಳಿಕೊಳ್ಳಬೇಕಾಯಿತು ರಾಜ್ಯ ಕಾಂಗ್ರೆ ಮುಖಂಡರಲ್ಲಿರುವ ಭಿನ್ನಾಭಿಪ್ರಾಯಗಳನ್ನರಿತುಕೊಂಡು ಅದಕ್ಕೆ ಪರಿಹಾರ ಕಂಡುಹಿಡಿಯುವಲ್ಲಿ ವಿಫಲರಾದ ಶ್ರೀಮತಿಯವರು, ಭಿನ್ನಾಭಿಪ್ರಾಯ ಬಗೆಹರಿಸಿ ಕೊಳ್ಳಲು ಸಾಧ್ಯವಾಗದಿದ್ದರೆ ಕೊನೆಪಕ್ಷ ಚುನಾವಣೆ ಮುಗಿಯುವ ತನಕವಾದರೂ ಅದನ್ನು ಮುಂದೆ ಹಾಕಿರೆಂದು ಕೈಮುಗಿದು ಕಣ್ಣೀರಿಟ್ಟು ವಿನಂತಿ ಮಾಡಿ ಕೊಳ್ಳುವಂಥ ಹೀನಾಯ ಪರಿಸ್ಥಿತಿ ರಾಜ್ಯದಲ್ಲುಂಟಾಗಿದೆ. ಸ್ವಾತಂತ್ರ್ಯ ಗಳಿಸಿ ದಂದಿನಿಂದಲೂ ಅಧಿಕಾರ ಚಲಾಯಿಸುತ್ತ ಬಂದ ಒಂದು ರಾಜಕೀಯ ಪಕ್ಷ, ಒಂದು ರಾಜ್ಯದಲ್ಲಿ ಅಧಿಕಾರ ಕಳೆದು ಕೊಂಡ 365 ದಿವಸಗಳಲ್ಲಿಯೇ ಹುಚ್ಚರಂತೆ ವರ್ತಿಸುತ್ತಿರುವುದು ಆಶ್ಚರ್ಯಕರ.

ತಾವು ಕಾಂಗ್ರೆ ಸೇರಿದ್ದೇ ಅಧಿಕಾರದ ಕುರ್ಚಿಯನ್ನು ಆಕ್ರಮಿಸಿ ಜನಸೇವೆ ಮಾಡಬೇಕೆಂಬ ಮಹೋದ್ದೇಶದಿಂದಲ್ಲವೇ ಅಂಥ ಅವಕಾಶವನ್ನ ಕಳೆದುಕೊಂಡಿರುವಾಗ ಅದನ್ನು ವಶಪಡಿಸಿಕೊಳ್ಳಲು ಹೊಸ ತಂತ್ರ-ಮಂತ್ರ ರೂಪಿಸಿ ತೋರಿಸದೆ, ಗ್ರಾಮಾಂತರ ಪ್ರದೇಶಗಳಲ್ಲಿ ಜನರ ಮಧ್ಯೆ ತೆಪ್ಪಗೆ ಮುಖ ಮಾಡಿ ತಿರುಗಾಡಿ ಸೇವೆ ಮಾಡಬೇಕೆಂದು ಹೇಳುವ ಬುದ್ಧಿವಾದ ಯಾವ ಪುಢಾರಿಗೆ ಹಿಡಿಸುತ್ತದೆ ನೀವೇ ಹೇಳಿ ? ವಿದೇಶಿ ಕಾರಿನಲ್ಲಿ ಸಂಚರಿಸಿ, ಹಾರ ಹಾಕಿಕೊಂಡು ಜೈಕಾರಗಳ ಮಧ್ಯೆ ಸೇವೆ ಸಲ್ಲಿಸಿದವರು ನಾವಲ್ಲವೇ ? ಸೇವೆ ಸಲ್ಲಿಸಲಿಕ್ಕೆ ಸಮಯ ಕಾಯೋಣ, ಈಗ ಉರುಳಿಸುವ ಕಾರ್ಯ ಮಾಡೋಣ, ಇದುವೇ ಮೊಯಿಲಿ, ಪಾಟೀಲ ಕಂಪನಿಯ ಏರಿದ ಧ್ವನಿ.

ಪಕ್ಷಾಂತರ ಮಾಡಿ ಹೆಗಡೆ ಸರಕಾರ ಉರುಳಿಸುವ ಮಹಾಯುದ್ಧದಲ್ಲಿ ಜಯಭೇರಿಯತ್ತ ಸೈನ್ಯ ವನ್ನೊಯ್ಯಲು ವಿಫಲರಾದ ಕೆ ಎಚ್ ಪಾಟೀಲರನ್ನೂ ಕೆ. ಪಿ ಸಿ ಸಿ. ಅಧ್ಯಕ್ಷ ಗದ್ದುಗೆಯಿಂದ ಕೆಳಗಿಳಿಸುತ್ತಾರೆಂಬ ದಟ್ಟ ವಾರ್ತೆ ಹಬ್ಬಿದೆ ಆ ಸ್ಥಾನಕ್ಕೆ ಬಂಗಾರಪ್ಪನವರನ್ನು ಪಟ್ಟಾಭಿಷೇಕ ಮಾಡುವ ಪ್ರಯತ್ನ ವಿಫಲಗೊಂಡಿದೆಯಂತೆ, ಹೆಗಡೆ ಸರಕಾರದಲ್ಲಿ ಲಿಂಗಾಯತ, ಒಕ್ಕಲಿಗರು ಪ್ರಭಾವಿತರಾಗಿದ್ದು ಹಿಂದುಳಿದ ವರ್ಗ ಅಸಮಾಧಾನಗೊಂಡಿದೆಂಬ ಗುಪ್ತವರದಿ ಇಂದಿರಮ್ಮನ ಕಿವಿ ಮುಟ್ಟಿರುವುದರಿಂದ ಕೆ. ಎಚ್. ಪಾಟೀಲರ ಸ್ಥಾನವನ್ನು ಬಸವಲಿಂಗಪ್ಪನೋ, ರಂಗನಾಥನೋ ಅಲಂಕರಿಸುವ ಸಂಭವವಿದೆಂಬ ಸುದ್ಧಿ ಕೇಳಿಬರುತ್ತಿದೆ ಆದರೆ ದಿಲ್ಲಿ ರಾಣಿಯ ಪ್ರೇಮಕಟಾಕ್ಷ ಯಾರ ಮೇಲೆ ಬೀಳುತ್ತದೆಂಬುದನ್ನು ಈಕ್ಷಿಸಿ ನೋಡ ಬೇಕಾಗಿದೆ.

ಬ್ಲಾಕ್ ಮೆಲ್ ಮಾಡುವವರಾರು ?

"ಕಮ್ಯೂನಿಸ್ಟ್ ಪಕ್ಷವು ಬ್ಲಾಕ್ ಮೇಲ್ ತಂತ್ರ ಬಳಸಿ ತನ್ನ ಬೇಡಿಕೆಗಳನ್ನು ಈಡೇರಿಸಿಕೊಳ್ಳುತ್ತಿದೆ, ಜನತಾ ಸರಕಾರ ಕಮ್ಯೂನಿಸ್ಟ್ ಪಕ್ಷವನ್ನು ಬೆಳೆಸಲು ಪರೋಕ್ಷವಾಗಿ ನೆರವಾಗುತ್ತಿದೆ." ಎಂದು ಭಾರತೀಯ ಜನತಾ ಪಾರ್ಟಿಯ ಅಧ್ಯಕ್ಷ ಶಿವಪ್ಪ ಆಪಾದಿಸಿದ್ದಾರೆ. ತಾವು ಹುಬ್ಬಳ್ಳಿಯಲ್ಲಿ ಮಾಡಿದ ಭಾಷಣದಲ್ಲಿ ಇಷ್ಟರಿಂದಲೇ ಸಮಾಧಾನಗೊಳ್ಳದೆ "ರಶ್ಯದಲ್ಲಿ ಮಳೆ ಬಿದ್ದರೆ ಕರ್ನಾಟಕದಲ್ಲಿ ಕೊಡೆ ಹಿಡಿಯುವ ನೀತಿಯನ್ನು ಹೊಂದಿರುವ ಕಮ್ಯೂನಿಸ್ಟರನ್ನು ಜನತಾ ಸರಕಾರ ದೂರವಿಡಬೇಕೆಂದೂ ಪತ್ರಿಕಾ ಗೋಷ್ಠಿಯಲ್ಲಿ ಕರೆ ನೀಡಿ ತಮ್ಮ ರಾಜಕೀಯ ತಿಳುವಳಿಕೆಯ ಅಭಾವವನ್ನು ಪ್ರದರ್ಶಿಸಿದ್ದಾರೆ.

ಪ್ರಾರಂಭದಿಂದಲೂ ಬ್ಲಾಕ್ ಮೆಲ್ ಮಾಡುತ್ತ ಹಲವಾರು ಕಾರ್ಪೊರೇಶನಗಳ ಅಧ್ಯಕ್ಷ ಪದಗಳನ್ನು, ಕಮಿಟಿಗಳ ಸದಸ್ಯತ್ವವನ್ನೂ ಗಿಟ್ಟಿಸಿ, ನೇಮಕಾತಿ ಸಮಿತಿಗಳಲ್ಲಿ ಹಣ ಗಳಿಸಲು ಹೊರಟವರು ಬಾ ಜ. ಪ.ದ ಶಿವಪ್ಪನ ಪಾರ್ಟಿಯವರು. ಇನ್ನಾದರೂ ಅದೇ ತಂತ್ರ ಉಪಯೋಗಿಸಿ ಹೆಚ್ಚಿನ ಸ್ಥಾನ ಗಿಟ್ಟಿಸಲು ಪ್ರಯತ್ನ ನಡೆಸುತ್ತಿರುವ ಶಿವಪ್ಪನವರು ಯಾವ ನಾಲಿಗೆಯಿಂದ ಕಮ್ಯೂನಿಸ್ಟರ ಮೇಲೆ ಬ್ಲಾಕ್ ಮೆಲ್ ಆರೋಪ ಹೊರಿಸುತ್ತಾರೆಂಬ ಬಹಿರಂಗ ಸವಾಲು ನಮ್ಮದಿದೆ, ಕಮ್ಯೂನಿಸ್ಟ್ ಪಾರ್ಟಿಗಳು ಯಾವ ಕಮಿಟಿಯ ಅಧ್ಯಕ್ಷಸ್ಥಾನವನ್ನಾಗಲೀ, ಕಮಿಟಿ ಸದಸ್ಯತ್ವವನ್ನಾಗಲೀ ಅಪೇಕ್ಷಿಸಿಲ್ಲ, ಪಡೆದಿಲ್ಲ. ನಮ್ಮ ಹೋರಾಟ, ನಮ್ಮ ಕೆಲಸದ ಆಧಾರದ ಮೇಲಿಂದಲೇ ನಾವು ಜನರ ಬೇಡಿಕೆಗಳನ್ನು ಪೂರೈಸಲು ಪ್ರಯತ್ನಿಸುತ್ತೇವಲ್ಲದೆ, ಶಿವಪ್ಪನವರ ಪಕ್ಷದಂತೆ ಬ್ಲಾಕ್ ಮೆಲ್ ಮಾಡಿಯಲ್ಲ.

ರಾಜ್ಯ ಮಟ್ಟದ ಅಧ್ಯಕ್ಷರಾಗಿರುವ ಶಿವಪ್ಪನವರ ರಾಜಕೀಯ ಪ್ರಜ್ಞೆ ಬಹಳ ಪೊಳ್ಳಾಗಿರುವಂತೆ ಕಂಡು ಬರುತ್ತದೆ ಮಾರ್ಕ್ಸವಾದಿ ಕಮ್ಯೂನಿಸ್ಟ್ ಪಾರ್ಟಿ ಸ್ವತಂತ್ರ ರಾಜಕೀಯ ನಿಲುವು ಹೊಂದಿದೆ ರಶ್ಯದ ತಪ್ಪು ನಿಲುವುಗಳನ್ನು ವಿರೋಧಿಸುತ್ತದೆಂಬ ಸಂಗತಿ ಎಲ್ಲರಿಗೂ ಗೊತ್ತು. ಹಾಗೆಯೇ ಸಿ ಪಿ. ಐ. ಕೂಡ ತನ್ನ ಧೋರಣೆಯಲ್ಲಿ ಬದಲಾವಣೆ ಮಾಡಿಕೊಂಡಿರುವ ಸಂಗತಿ ಶಿವಪ್ಪನವರಿಗೆ ಗೊತ್ತಿದ್ದಂತೆ ಕಂಡು ಬರುವುದಿಲ್ಲ. ಆದ್ದರಿಂದ ಕಮ್ಯೂನಿಸ್ಟರು ರಶ್ಯದಲ್ಲಿ ಮಳೆಯಾದಾಗ ಇಲ್ಲಿ ಛತ್ರಿ ಹಿಡಿಯುವವರಲ್ಲ, ಅಂಥ ಶ್ರೇಯಸ್ಸು ಶಿವಪ್ಪನವರ ಪಾರ್ಟಿಗೆ ಸಲ್ಲತಕ್ಕದ್ದು. ಅಮೇರಿಕಾ, ಇಸ್ರೈಲ್‌ಗಳ ರಾಜಕೀಯ ನೀತಿಯನ್ನು ಪೂರ್ಣ ಪಾಲಿಸಿಕೊಳ್ಳುವವರು ಬಾ ಜ. ಪ. ಪಕ್ಷ ಎಂದು ಎಲ್ಲರಿಗೂ ಗೊತ್ತು.

ಮತಗಳಿಕೆಯ ಹೊಸತಂತ್ರ

ಗರೀಬಿ ಹಟಾವೋ, 20 ಅಂಶ ಕಾರ್ಯಕ್ರಮ, ಅಂತ್ಯೋದಯ, ಗ್ರಾಮಾಂತರ ಅಭಿವೃದ್ಧಿ ಯೋಜನೆ, ಉದ್ಯೋಗ ದೃಢೀಕರಣ ಯೋಜನೆ ಮುಂತಾದ ಆಕರ್ಷಕ ಗುಳಿಗೆಗಳು ಜನಸಾಮಾನ್ಯರ ಸಮಸ್ಯೆಗಳನ್ನು ಬಗೆಹರಿಸಲಿಕ್ಕಾಗಲೀ, ಬಡತನವನ್ನು ದೂರ ಮಾಡಲಿಕ್ಕಾಗಲೀ ಫಲಕಾರಿಯಾಗದಿರುವುದನ್ನು ಕಂಡ ಕಾಂಗ್ರೆಸ್ (ಐ) ಯ ಕೆಲವು ಉತ್ಸಾಹಿ ತರುಣರು ಮುಂಬರುವ ಚುನಾವಣೆಯಲ್ಲಿ ಮತಗಳಿಸಲು ಹೊಸ ತಂತ್ರ ಹೂಡಿದ್ದಾರೆ. ರಾಷ್ಟ್ರೀಕೃತ ಬ್ಯಾಂಕುಗಳು ಸಾಲ ನೀಡುವಿಕೆಗಾಗಿ ನಿರ್ಧರಿಸಿರುವ ನಿಯಮಗಳನ್ನೆಲ್ಲ ಗಾಳಿಗೆ ತೂರಿ ಯಾವ ನಿರ್ಬಂಧ, ಜಾಮೀನುಗಳಿಲ್ಲದೆ ರೂ. 5000 ರವರೆಗೆ ಜನರಿಗೆ ಸಾಲ ನೀಡುವ ಕ್ರಮ ಇದಾಗಿದೆ.

ಜನವರಿ ತಿಂಗಳಲ್ಲಿ ಕಾಂಗ್ರೆ ಪ್ರಧಾನ ಕಾರ್ಯದರ್ಶಿ ರಾಜೀವಗಾಂಧಿ 40 ಸಾವಿರ ಜನರಿಗೆ ಬ್ಯಾಂಕ್ ಸಾಲ ವಿತರಣೆ ಮಾಡಿದರು ದಿಲ್ಲಿ ನಗರದಲ್ಲಿ, ಬಡ ಬಗ್ಗರಿಗೆ ಸಾಲ ನೀಡುವುದೇ ರಾಜಕೀಯ ತಂತ್ರವಾದರೆ ನಾವು ಇಂಥ ತಂತ್ರಗಳ ಮೂಲಕವೇ ರಾಜ್ಯಭಾರ ಮಾಡುತ್ತೇವೆಂದು ಇಂದಿರಾ ಗಾಂಧಿಯ ಭಾವೀ ಪ್ರಧಾನ ಮಂತ್ರಿ ಸಿಟ್ಟಿನ ಉದ್ಗಾರ ತೆಗೆದರು. ವಿರೋಧ ಪಕ್ಷಗಳಿಂದ ಕೇಳಿ ಬಂದ ಟೀಕೆಗಳಿಗೆ.

ಯಾರೋ ರಚಿಸಿದ ವಿಮಾನವನ್ನು ಚಾಲಕನಾಗಿ ಆಕಾಶದಲ್ಲಿ ಹಾರಿಸಿಕೊಂಡು ಹೋಗುವ ಅಭ್ಯಾಸವುಳ್ಳ ವಿಮಾನ ಚಾಲಕ ಈಗ ರಾಜಕೀಯ ಪಟು ರಾಜೀವ ಗಾಂಧಿ ಯಾರೋ ಬ್ಯಾಂಕುಗಳಲ್ಲಿಟ್ಟಿರುವ ಹಣವನು ಒದಗಿಟ್ಟಿಸಲು ಬಡವರ ಉದ್ಧಾರದ ಹೆಸರಲ್ಲಿ ಪುಕ್ಕಟೆಯಾಗಿ ದಾನ ಮಾಡುವ ಕಾರ್ಯಕ್ರಮ ಹಮ್ಮಿಕೊಂಡಿರುವುದು, ಇದೇ ರೀತಿಯಲ್ಲಿ ಬ್ಯಾಂಕಿನ ಹಣ ಚೆಲ್ಲಿ ಮತಗಳಿಸಿ ಅಧಿಕಾರ ನಡೆಸುತ್ತೇನೆಂದು ವಿರೋಧ ಪಕ್ಷದವರಿಗೆ ಆಹ್ವಾನ ನೀಡುತ್ತಿರುವುದನ್ನು ನೋಡುವಾಗ ದೇಶದ ರಾಜಕೀಯವನ್ನು ಎಷ್ಟು ಕೀಳ್ಮಟ್ಟಕ್ಕಿಳಿಸುತ್ತಿದ್ದಾರೆ ಈ ಹಗಲು ದರೋಡೆ ಖೋರರೆಂದು ಸ್ಪಷ್ಟವಾಗುತ್ತದೆ. ಉತ್ತರ ಪ್ರದೇಶದ ದರೋಡೆಖೋರರು ಬಿಹಾರಿನ ಭೂಮಿದಾರರಷ್ಟೇ ಇವರಿಗೆ ಅಂದರೆ ಆಳುವ ಕಾಂಗ್ರೆಸ್ಸಿಗೆ ಸಂಪನ್ಮೂಲಗಳಾಗಿದ್ದವೆಂದು ಪತ್ರಿಕೆಗಳು ಪ್ರಕಟಿಸುತ್ತಿದ್ದವು. ಈಗ ರಾಷ್ಟ್ರೀಕೃತ ಬ್ಯಾಂಕುಗಳೂ ಇವರಿಗೆ ಸಂಪನ್ಮೂಲ ಒದಗಿಸುವ ಸಾಧನೆಯಾಗಿದೆ.

ಓಟು ಗಿಟ್ಟಿಸುವಲ್ಲಿ 20 ಅಂಶಗಳ ಕಾರ್ಯಕ್ರಮಗಳನ್ನೊಗೊಂಡ ಯಾವ ತಂತ್ರವೂ ಫಲ ನೀಡಲು ಅಸಮರ್ಥವಾದಾಗ, ಬ್ಯಾಂಕುಗಳ ಹಣವನ್ನು ತಮ್ಮವರೆಂಬ "ಬಡವರಿಗೆ" ಪ್ರಭಾವಪೂರ್ಣ ಪ್ರಚಾರದೊಡನೆ ದಾನ ಮಾಡುವ ಕಾರ್ಯಕ್ರಮವನ್ನು ದಾನಶೂರ ರಾಜೀವ ಪ್ರಾರಂಭ ಮಾಡಿದ್ದಾರೆ ತಾನು ಮುಚ್ಚಿಟ್ಟಿರುವ ಹಣವನ್ನು ಹೊರ ತೆಗೆಯದೆ ನಮ್ಮ ಹಣವನ್ನೇ ನಮಗೆ ಕೊಟ್ಟು "ದಾನಶೂರ" ಬಿರುದು ಪಡೆಯುವ ರಾಜೀವನಿಗೆ ಈ ಬಡವರೇ ಮುಂದಿನ ಚುನಾವಣೆಯಲ್ಲಿ "ಕೈ" ಕೊಡಲಿದ್ದಾರೆಂಬ ಸಂಗತಿ ಚುನಾವಣೆಯ ನಂತರವೇ ಅರ್ಥಪೂರ್ಣವಾಗಿ ತಿಳಿಯುತ್ತದೆ. ಆದರೆ ಮಂಗಳೂರಿನ ಜನಾರ್ಧನ ಪೂಜಾರಿಯವರು ಮಾತ್ರ ಕೈ ಗಿಟ್ಟಿಸಿಯೇ ತೀರುತ್ತೇನೆಂಬ ದೃಢ ನಿರ್ಧಾರದಲ್ಲಿದ್ದಂತೆ ಕಂಡು ಬರುತ್ತದೆ.

ಐಕ್ಯತೆಯನ್ನು ಬಲಪಡಿಸಿ ಛಿದ್ರಕಾರಿ ಶಕ್ತಿಗಳನ್ನೆದುರಿಸಿ – ಕಾರ್ಮಿಕ ವಿರೋಧಿ ನೀತಿಯ ವಿರುದ್ಧ ಹೋರಾಟ ನಡೆಯಲಿ

ರಾಜ್ಯ ಸಿ. ಐ. ಟಿ. ಯು. ಕೌನ್ಸಿಲ್ ಸಭೆ ಕರೆ

ಕೇಂದ್ರ-ರಾಜ್ಯ ಸರಕಾರಗಳ ಆರ್ಥಿಕ ನೀತಿಯಿಂದಾಗಿ ಜೀವನಾವಶ್ಯಕ ವಸ್ತುಗಳ ಬೆಲೆ ಹೆಚ್ಚಾಗುತ್ತಿರುವಾಗ, ಅಸಮರ್ಪಕ ವಿದ್ಯುತ್ ಪೂರೈಕೆಯಿಂದಾಗಿ ಲಕ್ಷಾವಧಿ ಕೆಲಸಗಾರರು ಲೇ-ಆಫ್, ನೌಕರಿ ಕಳೆದು ಕೊಳ್ಳುವಿಕೆ, ಉತ್ಪಾದನೆಯಲ್ಲಿ ಕಡಿತ, ಕಾರ್ಖಾನೆಗಳು ಮುಚ್ಚುವಿಕೆಯ ಪರಿಸ್ಥಿತಿ, ಮುಷ್ಕರ ನಡೆದು, ಸರಕಾರಿ ಅಧಿಕಾರಿಗಳು ಜಂಟೀ ಸಭೆ ಕರೆದಾಗ ಮಾಲಕ ವರ್ಗ ಹಾಜರಾಗಲು ನಿರಾಕರಿಸುತ್ತಿರುವುದು ಮೊದಲಾದ ಸಮಸ್ಯೆಗಳ ಕುರಿತು ಚರ್ಚಿಸಿ, ಅವುಗಳಿಗೆ ಪರಿಹಾರ ಕಂಡು ಹಿಡಿದು ಸಂಯುಕ್ತ ಚಳುವಳಿ ನಡೆಸುವ ಕುರಿತು ಚರ್ಚಿಸಲು ಕರ್ನಾಟಕ ರಾಜ್ಯ ಸಿಐಟಿಯು ಕೌನ್ಸಿಲ್ ಸಭೆ ಫೆಬ್ರವರಿ 19-20 ರಂದು ದಾಂಡೇಲಿಯಲ್ಲಿ ಸೇರಿತ್ತು.

ವೆಸ್ಟಕೋಸ್ಟ್ ಪೇಪರ್ ಮಿಲ್, ಪ್ಲಾಯ್‌ವುಡ್, ಫೆರೋಮ್ಯಾಂಗನೀಸ್ ಕಾರ್ಖಾನೆಯ ಕೆಲಸಗಾರರು, ಗುಡಿಸಲು ವಾಸಿಗಳೂ ಕಳೆದ 20 ವರ್ಷಗಳಿಂದ ಕೆಂಬಾವುಟದಡಿಯಲ್ಲಿ ನಡೆಸಿಕೊಂಡು ಬಂದ ಹಲವಾರು ಹೋರಾಟಗಳು ದಬ್ಬಾಳಿಕೆ, ಜೈಲುವಾಸಗಳ ಪ್ರತಿಫಲವಾಗಿ ಇತ್ತೀಚೆಗೆ ನಡೆದ ನಗರ ಸಭೆ ಚುನಾವಣೆಯಲ್ಲಿ ಸಿ.ಐ.ಟಿ.ಯು. ಸದಸ್ಯರು ಬಹು ಸಂಖ್ಯೆಯಲ್ಲಿ ಆರಿಸಿ ಬಂದಿದ್ದು, ಕೌನ್ಸಿಲ್ ಸದಸ್ಯರಾದ ಟಿ. ಎಸ್. ನಾಯಕ್ (ಮುಷ್ಕರದಲ್ಲಿ ನೌಕರಿ ಕಳೆದುಕೊಂಡ ಕಾರ್ಮಿಕ) ಅವರು ಅಧ್ಯಕ್ಷರಾಗಿರುವ ದಾಂಡೇಲಿಯಲ್ಲಿ ಕೌನ್ಸಿಲ್ ಸಭೆ ನಡೆದಿರುವುದು ಮಹತ್ವಪೂರ್ಣ.

ಸೋವಿಯತ್ ಒಕ್ಕೂಟದ ಕಮ್ಯೂನಿಸ್ಟ್ ಪಕ್ಷದ ಪ್ರಧಾನ ಕಾರ್ಯದರ್ಶಿ ಮತ್ತು ದೇಶದ ಅಧ್ಯಕ್ಷ ಯೂರಿ ಆಂದ್ರೋಪೋವ್, ಸಿ.ಪಿ.ಐ (ಎಂ) ಪಿ. ಬಿ. ಸದಸ್ಯರಾದ ಪ್ರಮೋದ್ ದಾಸ್ ಗುಪ್ತಾ, ಸಿಪಿಐ (ಎಂ) ಸಿ. ಸಿ. ಸದಸ್ಯರಾದ ವೆಂಕಟರಾಮನ್, ದೇಸರಾಜ ಚಡ್ಡಾ, ರಾಜಸ್ತಾನದ ಕಾರ್ಮಿಕ ಮುಖಂಡ ದುರ್ಗಾ ದಾಸ್ ಶಿರಾಲಿ, ಮುಂಬಯಿಯ ಪಿ. ಕೆ. ಕುರ್ಣೆ, ಗುಲ್ಬರ್ಗದ ಗಂಗಾಧರ ನಮೋಶಿ, ಮಂಗಳೂರಿನ ಕೊರಗಪ್ಪ ರೈ ಹಾಗೂ ಇನ್ನಿತರ ಅಗಲಿದ ಮುಖಂಡರಿಗೆ ಸಂತಾಪ ಸೂಚಕ ನಿರ್ಣಯಗಳನ್ನೂ, ಗೂಂಡಾಗಿರಿಗೆ ತುತ್ತಾಗಿ ಅಸು ನೀಗಿದ ಕೆ ಜಿ ಎಫ್‌ನ ಆರೋಗ್ಯದಾಸ್ ಹಾಗೆಯೇ ಇತರರಿಗೆ ಶ್ರದ್ಧಾಂಜಲಿಯನ್ನರ್ಪಿಸಲಾಯಿತು.

ದಾಂಡೇಲಿಯ ಕಾರ್ಮಿಕ ಮುಖಂಡ ನಗರ ಸಭೆ ಸದಸ್ಯ ಉಮೇಶ ನಾಯಕ್ ಅವರು ಸ್ವಾಗತ ಭಾಷಣ ಮಾಡುತ್ತ ದಾಂಡೇಲಿಯ ಕಾರ್ಮಿಕರ ಹೋರಾಟಗಳನ್ನು ವಿವರಿಸಿ, ಇಂದು ಕಾರ್ಮಿಕರು ಎದುರಿಸುತ್ತಿರುವ ಸಮಸ್ಯೆಗಳಿಗೆ ಸಿಐಟಿಯು ಪರಿಹಾರ ಮಾರ್ಗ ಕಂಡು ಹಿಡಿಯಲಿ, ಹೋರಾಟದ ಮುಂದುವರಿಕೆಗೆ ಮಾರ್ಗದರ್ಶನ ಮಾಡಲೆಂದು ಹಾರೈಸಿದರು.

ಪ್ರಧಾನ ಕಾರ್ಯದರ್ಶಿ ಸಿ. ನಂಜುಂಡಪ್ಪನವರು ತಮ್ಮ ಸುದೀರ್ಘ ವರದಿಯಲ್ಲಿ ಜಗತ್ತಿನಲ್ಲಿ ಹೆಚ್ಚುತ್ತ ಬರುತ್ತಿರುವ ಅಣು ಯುದ್ಧದ ಅಪಾಯವನ್ನೂ, ಅಣುಯುದ್ಧವನ್ನು ವಿರೋಧಿಸುವ ವಿಶ್ವ ಶಾಂತಿಯ ರಕ್ಷಣೆಯನ್ನು ಬಯಸುವ ಜನರು ಜಗತ್ತಿನಾದ್ಯಂತ ನಡೆಸುತ್ತಿರುವ ಪ್ರತಿಭಟನೆಯನ್ನು ವಿವರಿಸಿ "ಎಲ್ಲಿಯವರೆಗೆ ಸಾಮ್ರಾಜ್ಯ ಶಾಹಿ ಇರುತ್ತದೆಯೋ ಅಲ್ಲಿಯವರೆಗೆ ಯುದ್ಧದ ಅಪಾಯ ಇರುತ್ತದೆ. ಸಾಮ್ರಾಜ್ಯಶಾಹಿ ವಿರೋಧಿ ಪ್ರಜ್ಞೆಯನ್ನು ಕಾರ್ಮಿಕರಲ್ಲಿ ಮೂಡಿಸಿ ಬೆಳೆಸ ಬೇಕು" ಎಂದು ಹೇಳಿದರು

ಶ್ರೀಲಂಕಾದಲ್ಲಿ ನಡೆಯುತ್ತಿರುವ ಘಟನೆಗಳು, ಕೇಂದ್ರ-ರಾಜ್ಯ ಸಂಬಂಧಗಳು, ವಿಭಜನಕಾರಿ ಶಕ್ತಿಗಳು, ಕರ್ನಾಟಕ ರಾಜ್ಯದಲ್ಲಿ ಕಾಂಗ್ರೆಸ್ (ಐ) ಅನುಭವಿಸಿದ ಸೋಲು, ಪಶ್ಚಿಮ ಬಂಗಾಲದ ಪಂಚಾಯತ್ ಚುನಾವಣೆಗಳಲ್ಲಿ ಎಡ-ಪ್ರಜಾಪ್ರಭುತ್ವ ಶಕ್ತಿಗಳ ವಿಜಯ, ನಮ್ಮ ರಾಜ್ಯದ ನಗರ ಸಭಾ ಚುನಾವಣೆಯಲ್ಲಿ ಸಿಐಟಿಯು ಉಪಾಧ್ಯಕ್ಷ ಟಿ ಎಸ್. ಮಣಿ (ಕೆ.ಜಿ.ಎಫ್.) ಕೌನ್ಸಿಲ್ ಸದಸ್ಯ ಉಮೇಶ್ ನಾಯಕ್ ಟಿ. ಎಸ್. ನಾಯಕ್, ಎಸ್. ವೈ ಪ್ರಭು (ದಾಂಡೇಲಿ) ಬಡೇಸಾಬ, ಸಲೀಮಾ ಬೇಗಂ (ಕುಣಿಗಲ್) ಅಬ್ರಾಹಂ ಕರ್ಕಡ (ಕುಂದಾಪುರ) ಸೂರ್ಯನಾರಾಯಣ ಭಟ್ (ಸುಳ್ಯ) (ಟಿ ಎಸ್. ನಾಯಕ್ ದಾಂಡೇಲಿ ಪುರ ಸಭೆಯ ಅಧ್ಯಕ್ಷರಾಗಿಯೂ, ಸೂರ್ಯನಾರಾಯಣ ಭಟ್, ಸುಳ್ಯ ಪುರ ಸಭೆಯ ಉಪಾಧ್ಯಕ್ಷರಾಗಿಯೂ) ಆರಿಸಿ ಬಂದಿರುವದನ್ನೂ ವಿವರಿಸಿದರು.

ತಮ್ಮ ವರದಿಯಲ್ಲಿ ಆರ್ಥಿಕ ಪರಿಸ್ಥಿತಿಯನ್ನು ವಿವರಿಸುತ್ತಾ "ಆರ್ಥಿಕ ಬೆಳವಣಿಗೆಯನ್ನು ಬಂಡವಾಳ ಶಾಹಿ ಪಥದಲ್ಲಿ ಕೊಂಡೊಯ್ಯುತ್ತಿರುವುದು ನಮ್ಮ ಆರ್ಥಿಕತೆಯನ್ನು ಬಂಡವಾಳ ಶಾಹಿ ಜಾಗತಿಕ ಬಂಡವಾಳ ಶಾಹಿ ಮಾರುಕಟ್ಟೆಗೆ ಜೋಡಿಸಿರುವುದು, ಸಾಮ್ರಾಜ್ಯ ಶಾಹಿಗಳ ಹಿಡಿತದಲ್ಲಿರುವ ವಿಶ್ವಬ್ಯಾಂಕ್ ಮತ್ತು ಅಂತರ ರಾಷ್ಟ್ರೀಯ ಹಣಕಾಸು ಸಂಸ್ಥೆಗಳನ್ನು ಅವಲಂಬಿಸಿರುವುದು, ಬಹು ರಾಷ್ಟ್ರೀಯ ಸಂಸ್ಥೆಗಳಿಗೆ ನಮ್ಮ ದೇಶದ ಜನರನ್ನು ಲೂಟಿ ಮಾಡಲು ಅವಕಾಶ ಮಾಡಿ ಕೊಟ್ಟಿರುವುದು ತೀವ್ರವಾದ ಆರ್ಥಿಕ ಬಿಕ್ಕಟ್ಟನ್ನುಂಟು ಮಾಡಿದೆಂದೂ ಈ ಕಾರಣದಿಂದಾಗಿಯೇ ಕೇಂದ್ರ ಸರಕಾರ ಇತ್ತೀಚೆಗೆ ಕಲ್ಲಿದ್ದಲು, ಸಕ್ಕರೆ, ಅಕ್ಕಿ ಮೊದಲಾದ ಹಲವು ವಸ್ತುಗಳ ಬೆಲೆಯೇರಿಸಿ ಬಿಕ್ಕಟ್ಟು ಉಲ್ಬಣಗೊಳ್ಳುವಂತೆ ಮಾಡಿದೆಂದೂ ಹೇಳಿದರು.

ಅಖಿಲ ಭಾರತ ಪ್ಲಾಂಟೇಶನ ಕೆಲಸಗಾರರ ಸಮಾವೇಶ, ಸಿಐಟಿಯು ಐದನೆಯ ಅಖಿಲ ಭಾರತ ಸಮಾವೇಶ, ಕಾರ್ಮಿಕ ಸಂಘಗಳ ರಾಷ್ಟ್ರೀಯ ಚಳುವಳಿಯ ಸಮಿತಿಯ 2 ನೇ ಅಖಿಲ ಭಾರತ ಸಮಾವೇಶ, 18 ರಾಜಕೀಯ ಪಕ್ಷಗಳ ಕಲ್ಕತ್ತಾ ಸಮಾವೇಶ, ಸಿ ಐ. ಟಿ ಯು ಕಾರ್ಯಕರ್ತರ ಮೇಲಿನ ದಾಳಿ, ರಾಜ್ಯದಲ್ಲಿ ಐಕ್ಯ ಚಳುವಳಿ ಮತ್ತು ಹೋರಾಟಗಳು, ಕರ್ನಾಟಕದಲ್ಲಿ ಪ್ಲಾಂಟೇಶನ ಕಾರ್ಮಿಕರ ಐಕ್ಯ ಹೋರಾಟ ಬೆಲೆ, ಏರಿಕೆ ಮತ್ತು ಕನಿಷ್ಟ ಕೂಲಿಗಾಗಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹತ್ತು ಸಾವಿರಕ್ಕೂ ಮೇಲ್ಪಟ್ಟು ಕಾರ್ಮಿಕರು ಬಂಧನಕ್ಕೊಳಗಾದ ಐಕ್ಯ ಚಳುವಳಿ ಹಾಗೆಯೇ ಇತ್ತೀಚಿಗಿನ ಹಂಚಿನ ಕಾರ್ಮಿಕರ ಹೋರಾಟ, ರಾಜ್ಯದ ಹತ್ತಿ ಗಿರಣಿ ಕಾರ್ಮಿಕರ ಮುಷ್ಕರ ಮೈಕೋ ಹೇಹರ ಫಾಲಿಫೈಬರ್, ಮೈಸೂರ್ ಕಿರ್ಲೋಸ್ಕರ್, ಎಂ. ಎಂ ಸಿ ಮೈಸೂರು, ಬೀಡಿ ಕಾರ್ಮಿಕರು, ಲೋಕೋಪಯೋಗಿ ಇಲಾಖೆಯ ದಿನಗೂಲಿ ಕೆಲಸ ಗಾರರು ನಡೆಸಿದ ಹೋರಾಟಗಳನ್ನು ವಿವರಿಸಿ ಸಿಐಟಿಯು ಸಂಘಟನೆಯನ್ನು ಬೆಳೆಸಬೇಕು, ವಿಸ್ತರಿಸಬೇಕು ಕಾರ್ಮಿಕರಲ್ಲಿ ಬೆಳೆದು ಬಂದಿರುವ ಆರ್ಥಿಕತೆಯನ್ನು ದೂರ ಸರಿಸಿ ಅವರಲ್ಲಿ ರಾಜಕೀಯ ಪ್ರಜ್ಞೆ ಮೂಡಿಸಬೇಕೆಂದು ಕರೆ ಕೊಟ್ಟರು.

ಸಿಐಟಿಯು ಬೆಳೆಯ ಬೇಕಾದರೆ, ನಮ್ಮ ಸಂಘಟನೆಯಲ್ಲಿರುವ ಕುಂದು ಕೊರತೆಗಳನ್ನು ತಾತ್ವಿಕ ಆಧಾರದಲ್ಲಿ ನಿವಾರಿಸಬೇಕೆಂದು ಸಿಐಟಿಯು ಅಧ್ಯಕ್ಷ ಸೂರ್ಯನಾರಾಯಣರಾವ್ ಹೇಳಿದರು. ನಮ್ಮಲ್ಲಿ ತಾತ್ವಿಕ ತಿಳುವಳಿಕೆ, ಪ್ರಜ್ಞಾ ಸಾಕಷ್ಟು ಬೆಳೆದು ಬಂದಿಲ್ಲದಿರುವುದರಿಂದ ನಾವು ಹೂಡುವ ಚಳುವಳಿಗಳಲ್ಲಿ ಬಲ ಪಂಥೀಯ ಹಾಗೆಯೇ ಎಡ ಪಂಥೀಯ ತಪ್ಪುಗಳು ಸಂಭವಿಸುತ್ತಿವೆಯೆಂದೂ, ಇವುಗಳ ನಿವಾರಣೆಯಾಗಿ ಸರಿದಾರಿಯಲ್ಲಿ ನಮ್ಮ ಹೋರಾಟಗಳನ್ನು ಮುಂದುವರಿಸಿಕೊಂಡು ಹೋಗಲು ಮಾರ್ಗದರ್ಶನ ಅಗತ್ಯವೆಂದೂ, ಕಾರ್ಯದರ್ಶಿಗಳಲ್ಲೊಬ್ಬರಾದ ವಿ ಜೆ ಕೆ ನಾಯರ ಹೇಳಿದರು. ಹಲವಾರು ಸಂಗಾತಿಗಳು ಚರ್ಚೆಯಲ್ಲಿ ಭಾಗವಹಿಸಿ, ತಮ್ಮ ಹೋರಾಟಗಳ ಅನುಭವಗಳನ್ನು ವಿವರಿಸಿದರು.

ಹಲವಾರು ನಿರ್ಣಯಗಳನ್ನು ಕೈಗೊಳ್ಳಲಾಯಿತು- (ಮುಂದಿನವಾರ ಪ್ರಕಟಿಸಲಾಗುವುದು) ರಾಜ್ಯ ಸರಕಾರದ ಕಾರ್ಮಿಕ ವಿರೋಧಿ ನೀತಿಯನ್ನು ಪ್ರತಿಭಟಿಸಲು ಮಾರ್ಚ್ 14 ರಂದು ರಾಜ್ಯಾದ್ಯಂತ ಪ್ರತಿಭಟನಾ ದಿನಾಚರಣೆ ಆಚರಿಸ ಬೇಕೆಂದೂ, ಮೇ ತಿಂಗಳಿಂದ "ಸಿಐಟಿಯು ಪತ್ರಿಕೆ" ಹೊರಡಿಸ ಬೇಕೆಂದೂ, ರಾಷ್ಟ್ರೀಯ ಚಳುವಳಿ ಸಮಿತಿಯ ಆದೇಶದ ಪ್ರಕಾರ ಮಾರ್ಚ್ 18 ರಂದು ಬೆಂಗಳೂರಿನಲ್ಲಿ ರಾಜ್ಯ ಸಮಾವೇಶ ನಡೆಸಬೇಕೆಂದೂ ನಿರ್ಣಯಿಸಲಾಯಿತು

ಕೌನ್ಸಿಲ್ ಸಭೆಯ ಕೊನೆಯಲ್ಲಿ ನಡೆದ ಪ್ರಚಂಡ ಸಾರ್ವಜನಿಕ ಸಭೆಯಲ್ಲಿ ಸೂರ್ಯನಾರಾಯಣರಾವ್, ಎನ್. ಕೆ. ಉಪಾಧ್ಯಾಯ, ನಂಜುಂಡಪ್ಪ ವಿ. ಜೆ. ಕೆ. ನಾಯರ್ ಅವರು ಭಾಷಣ ಮಾಡಿ, ಕೇಂದ್ರ ಸರಕಾರದ ಆರ್ಥಿಕ ನೀತಿಯನ್ನು ಬಯಲಿಗೆಳೆದು ರಾಜ್ಯದ ಕಾರ್ಮಿಕ ಮಂತ್ರಿ ಅಜೀಜ್ ಸೇಟ್ ಅವರು ಮೈಸೂರಿನ ಎಂ ಎಂ.ಸಿ ಕೆಲಸಗಾರರ ಮುಷ್ಕರದ ಕುರಿತು ಪ್ರತಿಕ್ರಿಯೆ ವ್ಯಕ್ತ ಮಾಡುತ್ತ "ನಾನು ಸರ್ವಾಧಿಕಾರಿಯಾಗಿದ್ದರೆ ಈ ಕಾರ್ಮಿಕರನ್ನು ಗುಂಡಿಕ್ಕಿ ಕೊಲ್ಲುತ್ತಿದ್ದೆ" ಎಂದು ಹೇಳಿರುವುದನ್ನು ಬಲವಾಗಿ ಖಂಡಿಸಿ, ದಾಂಡೇಲಿಯ ಕಾರ್ಮಿಕರೂ ಸಾರ್ವಜನಿಕರೂ, ಸಿಐಟಿಯು ಪ್ರತಿನಿಧಿಗಳನ್ನು ಬಹು ಸಂಖ್ಯೆಯಲ್ಲಿ ಪುರ ಸಭೆಗೆ ಆರಿಸಿ ತಂದಿರುವುದಕ್ಕಾಗಿ ಅವರನ್ನು ಅಭಿನಂದಿಸಿ, ಸಿಐಟಿಯು ಕಾರ್ಮಿಕ ವರ್ಗದ ಆಶೋತ್ತರಗಳನ್ನು ಪೂರೈಸಲು ನಿಷ್ಠೆಯಿಂದ ದುಡಿಯುವುದೆಂಬ ಆಶ್ವಾಸನೆಯನ್ನಿತ್ತರು.

ಬೆಂಗಳೂರು

ಬಿ. ಎನ್. ಎಂ. ಕಾಲೇಜಿನಲ್ಲಿ ಎಸ್. ಎಫ್. ಐ. ವಿದ್ಯಾರ್ಥಿನಿಯರ ಸಮಿತಿ

ದಿನಾಂಕ 18-2-1984 ರಂದು ಮಧ್ಯಾಹ್ನ ಒಂದು ಗಂಟೆಗೆ ಭಾಗೀರಥಿ ಬಾಯಿ ನಾರಾಯಣರಾವ್ ಮಾನಿ ಮಹಿಳಾ (ಬಿ. ಎನ್ ಎಂ.) ಕಾಲೇಜಿನಲ್ಲಿ ಎಸ್. ಎಫ್. ಐ. ಸರ್ವ ಸದಸ್ಯರ ಸಭೆಯನ್ನು ಕರೆಯಲಾಗಿತ್ತು. ಕಾ|| ಶಾಂತಕುಮಾರಿ ಎಸ್. ಎಫ್. ಐ. ಬೆಳೆದು ಬಂದ ದಾರಿ ಬಗ್ಗೆ ವಿವರಿಸಿದರು ಆದರಲ್ಲಿ ವಿದ್ಯಾರ್ಥಿನಿಯರ ಪಾತ್ರದ ಕುರಿತು ಮಾತನಾಡಿದರು. ಕಾ|| ತೇಜಸ್ವಿನಿ ವಿದ್ಯಾರ್ಥಿನಿಯರ ಸಂಘಟನೆಯ ಕುರಿತು ಮಾತನಾಡಿದರು. ಕಾ|| ಲೀಲಾವತಿ ಎಸ್. ಎಫ್. ಐ. ಬೇಡಿಕೆಗಳ ಕುರಿತು ತಿಳಿಯ ಪಡಿಸಿದರು.

ಕಾಲೇಜಿನ ಸಂಘಟನಾ ಸಮಿತಿ ರಚಿಸಲಾಯಿತು. ಕಾ|| ಶಾಂತಕುಮಾರಿಯವರು ಸಂಚಾಲಕಿಯಾಗಿ, ಸಹ ಸಂಚಾಲಕರಾಗಿ ಕಾ|| ರಮಾಮಣಿ (ಕಾಲೇಜು ಸಂಘದ ಕಾರ್ಯದರ್ಶಿ) ಮತ್ತು ಪಿ. ಎಸ್. ಉಷಾರಾಣಿ ಸರ್ವಾನುಮತದಿಂದ ಆಯ್ಕೆಯಾದರು. ಹದಿನೈದು ಸದಸ್ಯರನ್ನೊಳಗೊಂಡ ಸಂಘಟನಾ ಸಮಿತಿ ರಚಿಸಲಾಯಿತು.

ಬೆಂಗಳೂರು

ರೈತ ಸಂಘದಿಂದ ಧರಣಿ

ಬೆಂಗಳೂರು ದಕ್ಷಿಣ ತಾಲ್ಲೂಕು ಮತ್ತು ಆನೇಕಲ್ ತಾಲ್ಲೂಕುಗಳಲ್ಲಿ ರೈತರ ಬೆಳೆಗಳು ಆನೆಗಳ ಹಾವಳಿಗೆ ತುತ್ತಾಗಿರುವುದನ್ನು ಪ್ರತಿಭಟಿಸಿ ಸಂಕಷ್ಟಕ್ಕೊಳಗಾದ ರೈತರಿಗೆ ಸರ್ಕಾರ ಪರಿಹಾರ ನೀಡಬೇಕೆಂದು ಒತ್ತಾಯಿಸಿ 14-2-84 ರಂದು ಬೆಂಗಳೂರು ಜಿಲ್ಲಾಧಿಕಾರಿ ಕಚೇರಿ ಎದುರು ಮಧ್ಯಾಹ್ನ 11 ರಿಂದ 2 ಗಂಟೆ ವರೆಗೆ ಧರಣಿ ಸತ್ಯಾಗ್ರಹ ನಡೆಸಲಾಯಿತು. ನಂತರ ಜಿಲ್ಲಾಧಿಕಾರಿಗೆ ಮನವಿ ಪತ್ರ ಸಲ್ಲಿಸಲಾಯಿತು.

ಬೆಂಗಳೂರು

ಗ್ರಂಥಾಲಯ ಉದ್ಘಾಟನೆ

ಡಿ. ವೈ. ಎಫ್. ಐ. ಶ್ರೀ ರಾಮಪುರ ಶಾಖೆ ಆಶ್ರಯದಲ್ಲಿ 29-1-84 ರಂದು ಕಾ. ಎಂ. ಚಂದ್ರಶೇಖರ್ ಸ್ಮಾರಕ ಗ್ರಂಥಾಲಯವನ್ನು ಡಿ. ವೈ. ಎಫ್. ಐ ಕರ್ನಾಟಕ ರಾಜ್ಯ ಸಮಿತಿ ಕಾರ್ಯದರ್ಶಿ ಕಾ. ಶಿವರಾಂ ಅವರು ಉದ್ಘಾಟಿಸಿದರು. ಇದೇ ಸಂದರ್ಭದಲ್ಲಿ ಹೈಸ್ಕೂಲ್ ವಿದ್ಯಾರ್ಥಿಗಳಿಗಾಗಿ ರಾತ್ರಿ ಪಾಠ ಶಾಲೆಯನ್ನು ಸಹ ಆರಂಭಿಸಲಾಯಿತು ಕಾ. ಜಿ. ಎನ್. ನಾಗರಾಜ್ ಕಾ. ಗೋಪಾಲಕೃಷ್ಣ ಕಾ. ರಮೇಶ್, ಕಾ. ರಾಜೇಂದ್ರ ಕುಮಾರ್ ಮುಂತಾದವರು ಸಮಾರಂಭದಲ್ಲಿ ಮಾತನಾಡಿದರು.

ಇಂದಿರಾ ಗಾಂಧಿಯ ನುಡಿಗಳ ಬಗ್ಗೆ

—ಎಂ. ಬಸವಪುನ್ನಯ್ಯ

ಕಾಂಗ್ರೆಸ್ ಪಕ್ಷದ ಎಪ್ಪತ್ತೇಳನೆಯ ಸಂಪೂರ್ಣ ಅಧಿವೇಶನದಲ್ಲಿ ಶ್ರೀಮತಿ ಇಂದಿರಾ ಗಾಂಧಿಯವರು ಮಾಡಿದ ಅಧ್ಯಕ್ಷ ಭಾಷಣದಲ್ಲಿ, ಅಧಿವೇಶನದ ಎರಡು ಪ್ರಮುಖ ಠರಾವುಗಳಾದ ರಾಜಕೀಯ ನಿರ್ಣಯ ಹಾಗೂ ಆರ್ಥಿಕ ನಿರ್ಣಯಗಳಲ್ಲಿ ಅನೇಕ ಟೊಳ್ಳು ವಾದಗಳು ಅಡಗಿರುವುದರಿಂದ ಅದನ್ನು ಬಯಲು ಮಾಡುವುದು ಅವಶ್ಯವೆಂದು ತೋರುತ್ತದೆ. ಇಂತಹ ಒಂದು ಸಣ್ಣ ಲೇಖನದಲ್ಲಿ ಈ ಸಮಸ್ಯೆಗಳನ್ನು ವಿಶದವಾಗಿ ಹೇಳಲು ಆಗುವುದಿಲ್ಲವಾದುದರಿಂದ ಅವರು ಮಾಡಿದ ಭಾಷಣ ಮತ್ತು ನಿರ್ಣಯಗಳ ಒಂದೆರಡನ್ನು ಮಾತ್ರ ಇಲ್ಲಿ ವಿಮರ್ಶಿಸೋಣ.

ಎಡ ಪಂಥೀಯ ವಿರೋಧ ಪಕ್ಷಗಳ ಬಗ್ಗೆ ಶ್ರೀಮತಿ ಇಂದಿರಾಗಾಂಧಿ ಈ ರೀತಿ ಹೇಳುತ್ತಾರೆ: "ನಮ್ಮ ಆಂತರಿಕ ಧೋರಣೆಯನ್ನು ವಿರೋಧಿಸುವಾಗಲೇ ನಮ್ಮ ವಿದೇಶ ಧೋರಣೆಗೆ ನಮ್ಮ ಬೆಂಬಲವನ್ನು ಸೂಚಿಸುವುದಾಗಿ ಕೆಲವು ಎಡಪಂಥೀಯ ಗುಂಪುಗಳವರು ಹೇಳುತ್ತಿದ್ದಾರೆ. ಅಧಿಕಾರದಿಂದ ನಮ್ಮನ್ನು ಹೊರ ಹಾಕುವ ಅವರ ನಿಶ್ಚಯವನ್ನು ರಹಸ್ಯವಾಗಿಟ್ಟಿಲ್ಲ" ಮುಂದುವರಿದು ಈ ಗುಂಪುಗಳು ಕೋಮುವಾದಿ ಪಕ್ಷಗಳ ಮತ್ತು ಬಲ ಪಂಥೀಯ ಪ್ರತಿಗಾಮಿ ಪಕ್ಷಗಳೊಂದಿಗೆ ಸೇರುವುದಾಗಿಯೂ ಆಕೆ ಅಪಾದಿಸುತ್ತಾರೆ. "ಆಂತರಿಕ ಧೋರಣೆಯ ವಿಸ್ತರಣೆಯೇ ವಿದೇಶ ಧೋರಣೆ ಎಂಬುದನ್ನು ತಿಳಿಯಲು ಹೆಚ್ಚು ಯೋಚಿಸಬೇಕಾಗಿಲ್ಲ" ಹೀಗೆಂದು ಹೇಳಿ ಕಮ್ಯೂನಿಸ್ಟರ ಮೇಲೆ ಕಲ್ಲೆಸೆಯಲು ಅದರಿಂದ ಉತ್ತಮ ಮಾರ್ಕ್ಸಿಸ್ಟ್ ತಾನೆಂದು ನಟಿಸಲು ಹವಣಿಸುತ್ತಿದ್ದಾರೆ ಭಾರತೀಯ ನವ ಸಮಾಜವಾದಿಯಾದ ಇಂದಿರಾಗಾಂಧಿಯವರು. ಕಮ್ಯೂನಿಸ್ಟ್ ಎಡ ಪಕ್ಷವನ್ನು ವ್ಯಂಗ್ಯ ರೂಪದಲ್ಲಿ ವಿಮರ್ಶಿಸಲು ಕೆಲವು ಗುತ್ತೇದಾರಿ ಪತ್ರಿಕೆಗಳೂ ಅವುಗಳ ಬುದ್ಧಿವಂತ ಸಂಪಾದಕರೂ ತಕ್ಷಣವೇ ಈ ಮಾತನ್ನು ಅರಿಸಿಕೊಂಡಿದ್ದಾರೆ. ಬಹುಶಃ ಮಾರ್ಕ್ಸ್‌ವಾದಿಗಳಿಗೆ 'ನಿಜವಾದ' ಮಾರ್ಕ್ಸ್‌ವಾದವನ್ನು ಕಲಿಸಲಿರಬಹುದು

ಆಂತರಿಕ ಧೋರಣೆಗಳು

1947 ರಲ್ಲಿ ಸ್ವಾತಂತ್ರ್ಯಗಳಿಸಿದ ನಂತರ ಭಾರತದ ಆಳುವ ವರ್ಗಗಳ ಆಂತರಿಕ ಧೋರಣೆ ಏನು? ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ದೃಷ್ಟಿಯಿಂದ ಹೇಳುವುದಾದರೆ ಪಕ್ಷದ ಏಳನೇ ಅಧಿವೇಶನದಲ್ಲಿ ಅಂಗೀಕರಿಸಿದ ಹೊಸ ಕಾರ್ಯಕ್ರಮದಲ್ಲಿ ಅದನ್ನು ಬಹಳ ಸ್ಪಷ್ಟವಾಗಿ ಹೀಗೆ ವ್ಯಕ್ತ ಪಡಿಸಿದೆ "ಸ್ವಾತಂತ್ರ್ಯನಂತರ ದೇಶವನ್ನಾಳುವ ಬಂಡವಾಳ ಶಾಹಿಯು ಸಮಾಜದಲ್ಲಿ ತನ್ನ ವರ್ಗ ಸ್ಥಾನವನ್ನು ಮತ್ತಷ್ಟು ಬಲಪಡಿಸಲು ಬಂಡವಾಳ ಶಾಹಿ ದಿಕ್ಕಿನಲ್ಲಿ ರಾಷ್ಟ್ರದ ಆರ್ಥಿಕ ವ್ಯವಸ್ಥೆಯನ್ನು ಬೆಳೆಸಲಾರಂಭಿಸಿತು. ಜಾಗತಿಕ ಬಂಡವಾಳ ಶಾಹಿ ಪದ್ಧತಿಯು ರಭಸದಿಂದ ಕುಸಿಯುತ್ತಿದ್ದು ಬಂಡವಾಳ ಶಾಹಿಯ ಸಾರ್ವತ್ರಿಕ ಬಿಕ್ಕಟ್ಟಿನ ಮೂರನೇ ಘಟ್ಟವನ್ನು ಪ್ರವೇಶಿಸುತ್ತಿರುವ ಸನ್ನಿವೇಶದಲ್ಲಿಯೇ ಭಾರತದ ಪ್ರಭುತ್ವ ಈ ಬಂಡವಾಳ ಶಾಹಿ ಬೆಳವಣಿಗೆಯ ಹಾದಿಯನ್ನು ಆರಿಸಿದೆ ಎಂಬ ಅಂಶವನ್ನು ಗಮನಿಸಬೇಕಾಗಿದೆ. ಆದರೆ ಬಂಡವಾಳ ಶಾಹಿಗೆ ಭಾರೀ ಕೈಗಾರಿಕೆಗೆ ಬೇಕಾದ ತಾಂತ್ರಿಕ ತಳಹದಿಯಾಗಲೀ ಸಾಮ್ರಾಜ್ಯಶಾಹಿಗಳಿಗೆ ಸುಲಿಗೆಯ ಮೂಲಕ ದೊಡ್ಡ ರೀತಿಯ ಬಂಡವಾಳ ಶೇಖರಣೆಯನ್ನು ಒದಗಿಸುವಂತಹ ವಸಾಹತು ಸಾಮ್ರಾಜ್ಯವಾಗಲೀ ಅದಕ್ಕಿಲ್ಲ. ತನ್ನ ಬಂಡವಾಳದ ಅವಶ್ಯಕತೆಗಳಿಗಾಗಿಯೂ, ಆರ್ಥಿಕ ವ್ಯವಸ್ಥೆಯನ್ನು ಬಂಡವಾಳ ಶಾಹಿ ಮಾರ್ಗದಲ್ಲಿ ಬೆಳೆಸುವ ಸಲುವಾಗಿಯೂ ತಾನು ಪಡೆದಿದ್ದ ಪ್ರಭುತ್ವ ಶಕ್ತಿಯನ್ನು, ಜನ ಸಾಮಾನ್ಯರ ಪರಿಶ್ರಮದ ಫಲವನ್ನು ಕಸಿದುಕೊಳ್ಳಲು ಅದು ಉಪಯೋಗಿಸಿತು. ಸ್ವಾತಂತ್ರ್ಯನಂತರ ಕಾಂಗ್ರೆಸ್ ಸರ್ಕಾರದ ಆರ್ಥಿಕ ಧೋರಣೆಗಳು ಈ ದಿಕ್ಕಿನಲ್ಲೇ ಮುಂದುವರಿದು ಬಂದಿದೆ" (ಕಾರ್ಯಕ್ರಮ ಪರಿಚ್ಛೇದ 12)

ಸ್ವಾತಂತ್ರ್ಯನಂತರ ಭಾರತದ ಪ್ರಭುತ್ವ ಮತ್ತು ಸರ್ಕಾರದ ಆಂತರಿಕ ಧೋರಣೆಗಳ ಮೂಲಭೂತ ಗುರಿ ಭಾರತದಲ್ಲಿ ಬಂಡವಾಳ ಶಾಹಿ ಪದ್ಧತಿಯನ್ನು ಕಟ್ಟುವುದೇ ಆಗಿದೆಯೆಂದು ಸಿ. ಪಿ. ಐ (ಎಂ) ಯಾವಾಗಲೂ ಸ್ಪಷ್ಟ ಪಡಿಸುತ್ತಾ ಬಂದಿದೆ.

ಸಿ. ಪಿ. ಐ.ನ ನಿಲುವು

ಸಿ. ಪಿ. ಐ. ಕೂಡ ಮೂಲಭೂತವಾಗಿ ಕೆಲವು ರಾಜಕೀಯ ಸೈದ್ಧಾಂತಿಕ ರಂಗದಲ್ಲೂ ಸಿ ಪಿ ಐ (ಎಂ) ನೊಡನೆ ಅಭಿಪ್ರಾಯ ಭಿನ್ನತೆಗಳಿದ್ದರೂ ಈ ವಿಷಯದಲ್ಲಿ ಭಿನ್ನಮತಗೊಂಡಿಲ್ಲ. ಎಂದರೆ ಭಾರತದ ಪ್ರಭುತ್ವವು ಹಾಗೂ ಸರ್ಕಾರವು ಭಾರತದಲ್ಲೂ ಬಂಡವಾಳ ಶಾಹಿ ಅಭಿವೃದ್ಧಿಯ ಮಾರ್ಗದಲ್ಲಿ ಮುಂದುವರಿಯುತ್ತಿದೆ ಎಂದು ಅವರ ಕಾರ್ಯಕ್ರಮದ 2ನೇ ಪರಿಚ್ಛೇದ ಹೇಳುತ್ತಿದೆ. ಸಮಾಜವಾದದ ಬಗ್ಗೆ ಎಷ್ಟೋ ಬೊಬ್ಬೆ ಹಾಕಿ ಹೇಳಿದರೂ ಕಾಂಗ್ರೆಸ್ ಪಕ್ಷದ ಮತ್ತು ಸರ್ಕಾರದ ನೇತೃತ್ವದಲ್ಲಿ ಬೆಳೆದು ಬರುತ್ತಿರುವುದು ಬಂಡವಾಳ ಶಾಹಿ ಪದ್ಧತಿಯೇ–ಖಾಸಗಿ ಕ್ಷೇತ್ರದಲ್ಲಿ ಖಾಸಗಿ ಬಂಡವಾಳವು, ಸಾರ್ವಜನಿಕ ಕ್ಷೇತ್ರದಲ್ಲಿ ಪ್ರಭುತ್ವ ಬಂಡವಾಳ ಶಾಹಿ ಎಂಬುದನ್ನು ಅವರ ಕಾರ್ಯಕ್ರಮದ 13ನೇ ಪರಿಚ್ಛೇದ ಸ್ಪಷ್ಟ ಪಡಿಸುತ್ತದೆ.

ಆದ್ದರಿಂದ ಕಾಂಗ್ರೆಸ್ ಸರ್ಕಾರದ ಆಂತರಿಕ ಧೋರಣೆಯ ವರ್ಗ ಗುಣ ಏನೆಂಬುದರಲ್ಲಿ ಯಾವುದೇ ರೀತಿಯ ಸಂಶಯವಿಲ್ಲ. ಭಾರತದ ಕಮ್ಯೂನಿಸ್ಟರು ಹಾಗೂ ಇತರ ಎಡ ಪಕ್ಷಗಳ ಪ್ರಕಾರ ಅದು ಖಾಸಗಿ ಬಂಡವಾಳವನ್ನೂ ಮತ್ತು ಪ್ರಭುತ್ವ ಬಂಡವಾಳವನ್ನು ಕಟ್ಟುವುದೇ ಹೊರತು ಬೇರೆ ಏನೂ ಅಲ್ಲ.

ಭಾರತ ಸರ್ಕಾರದ ಆಂತರಿಕ ಧೋರಣೆ ಅಪರ ಬಂಡವಾಳ ಶಾಹಿ ಅಭಿವೃದ್ಧಿ ಮಾರ್ಗದ ಬಗ್ಗೆ ಹೇಳಿರುವುದು ಇಷ್ಟು ಮಾತ್ರವೇನು? ಅಲ್ಲ. ಈ ಬಂಡವಾಳ ಶಾಹಿ ಮಾರ್ಗದಲ್ಲಿ ಅಡಗಿರುವ ವಿಪತ್ತನ್ನು ಮತ್ತಷ್ಟು ಸ್ಪಷ್ಟವಾಗಿ ನಮ್ಮ ಕಾರ್ಯಕ್ರಮದ 33ನೇ ಪರಿಚ್ಛೇದ ಹೀಗೆ ಹೇಳುತ್ತದೆ. "ಬಂಡವಾಳ ಶಾಹಿಯ ಸಾರ್ವತ್ರಿಕ ಬಿಕ್ಕಟ್ಟಿನ ಕಾಲಾವಧಿಯಲ್ಲಿ, ಅದರಲ್ಲೂ ಮುಖ್ಯವಾಗಿ ಹೊಸ ತೀವ್ರವಾದ ಹಂತವನ್ನು ತಲುಪಿರುವಾಗ, ಹಿಂದುಳಿದ ದೇಶಗಳು ಬಂಡವಾಳ ಶಾಹಿ ಪಥದಲ್ಲಿ ಅಭಿವೃದ್ಧಿ ಗಳಿಸಲು ಯತ್ನಿಸುವುದು ನಿಷ್ಫಲವಾಗಿದೆ. ಇದನ್ನು ಮೂರು ಯೋಜನೆಗಳ ಅನುಭವವು ಸಂಶಯಕ್ಕೆಡೆಯಿಲ್ಲದೆ ತೋರಿಸಿಕೊಟ್ಟಿದೆ. ಅಂತಹ ಬೆಳವಣಿಗೆಯ ಸಾಧ್ಯತೆಗಳು ಬಹಳ ಸೀಮಿತವಾಗಿದೆ. ನಮ್ಮ ಮೂಲಭೂತ ಸಮಸ್ಯೆಗಳಾದ ಆರ್ಥಿಕ ಪರಾವಲಂಬನೆ, ಹಿಂದುಳಿದಿರುವಿಕೆ, ಬಡತನ, ನಿರುದ್ಯೋಗಗಳನ್ನು ಅದು ಬಗೆಹರಿಸಲಾರದು. ದೇಶದ ಮಾನವ ಶಕ್ತಿಯನ್ನು ಸಂಪೂರ್ಣವಾಗಿ ಉಪಯೋಗಿಸುವಂತೆ ಖಚಿತ ಪಡಿಸುವುದು ಇದರಿಂದ ಸಾಧ್ಯವಿಲ್ಲ. ನಿರಂತರವಾಗಿ ಬೆಳೆಯುತ್ತಿರುವ ವೈರುಧ್ಯಗಳಿಗೆ ಅದು ಅವಕಾಶ ಕೊಡುತ್ತದೆ. ಸಮತೋಲ ತಪ್ಪುವುದೂ, ಬಿಕ್ಕಟ್ಟು ಬರುವುದೂ ಅದರ ನಿತ್ಯ ಕ್ರಮವಾಗಿದೆ. ಬಂಡವಾಳ ಶಾಹಿ, ಬೆಳವಣಿಗೆಯ ಪಥವು ಜನ ಸಾಮಾನ್ಯರ ಮೇಲೆ ಹೊರಲಾಗದ ಹೊರೆಗಳನ್ನು ಹೇರಿ ಅವರನ್ನು ಅತೀ ಸಂಕಷ್ಟಕ್ಕೆ ಬಲಿ ಕೊಡುತ್ತದೆ ಒಂದು ಉತ್ತಮ ಭವಿಷ್ಯತ್ತಿನ ಭರವಸೆಯನ್ನು ಜನತೆಗೆ ಅದು ನೀಡುವುದಿಲ್ಲ. ಬಂಡವಾಳ ಶಾಹಿ ಬೆಳವಣಿಗೆಯ ಮಾರ್ಗದೊಂದಿಗೆ ಜನತೆ ಅನಿವಾರ್ಯವಾಗಿ ಬಿಕ್ಕಟ್ಟಿಗೆ ಬರುವಂತೆ ಅದು ಮಾಡುತ್ತದೆ" ಈ ವಿಷಯದ ಬಗ್ಗೆ ಸಿ. ಪಿ. ಐ.ನ ಕಾರ್ಯಕ್ರಮದ 24 ನೇ ಪರಿಚ್ಛೇದ ಹೀಗೆ ಹೇಳುತ್ತದೆ. "ಜನತೆಯ ಮತ್ತು ದೇಶೀಯ ಬಂಡವಾಳ ಶಾಹಿಯ ಕೆಲವು ವಿಭಾಗಗಳ ಖರ್ಚಿನಲ್ಲಿ ಸ್ವಯಂ ಸಂಪನ್ನರಾಗಲು ಬಯಸುವ ಕೆಲವು ಹಿರೇ ಗುತ್ತೇದಾರಿಗಳ ಕೈಯಲ್ಲಿ ರಾಷ್ಟ್ರದ ಸ್ವಾವಲಂಬನೆ ಅಪಾಯಕ್ಕೊಳಗಾಗುವ ರೀತಿಯಲ್ಲಿ, ಬಂಡವಾಳವೂ, ಆರ್ಥಿಕ ಅಧಿಕಾರವೂ ಕೇಂದ್ರೀಕರಿಸುವುದೇ. ಈ ಬಂಡವಾಳ ಶಾಹಿ ಅಭಿವೃದ್ಧಿಯ ಮಾರ್ಗದ ಎದ್ದು ಕಾಣುವ ಫಲಿತಾಂಶ."

ಬಂಡವಾಳ ಶಾಹಿಯನ್ನು ಕಟ್ಟುವುದು

ಕಾರ್ಮಿಕ ವರ್ಗದ ಮತ್ತು ಸಮಾಜವಾದದ ಏಳಿಗೆಗಾಗಿ ನಿಲ್ಲುವ ಭಾರತದ ಎಡ ಪಕ್ಷದವರೂ, ಕಮ್ಯೂನಿಸ್ಟರೂ, ಕಾರ್ಮಿಕ ವರ್ಗದ ಹಾಗೂ ಶೋಷಿತ ಜನ ವಿಭಾಗದ ಹಿತವನ್ನು ಕಾಪಾಡುವ ಸಲುವಾಗಿಯೂ ಜಾಗತಿಕ ಸಾಮ್ರಾಜ್ಯ ಶಾಹಿಯ ಪಿತೂರಿಯಿಂದ ರಾಷ್ಟ್ರೀಯ ಸ್ವಾವಲಂಬನದ ಹಿತವನ್ನು ಸಂರಕ್ಷಿಸಲು ನಾವು ನಿಂತಿನೆವೆ ಎಂದು ಬಹಿರಂಗವಾಗಿ ಘೋಷಿಸುತ್ತಾರೆ. ಕಾಂಗ್ರೆಸ್ ಪ್ರಭುತ್ವವು ಭಾರತದಲ್ಲಿ ಕಟ್ಟುತ್ತಿರುವುದು ಶುದ್ಧ ಬಂಡವಾಳ ಶಾಹಿ ಪದ್ಧತಿ ಎಂದು ಹೇಳುವುದಕ್ಕಿರುವ ಪ್ರಾಮಾಣಿಕತೆ, ಸತ್ಯಸಂಧತೆ ಅವರಿಗಿದೆ. ಬಂಡವಾಳ ಶಾಹಿಯಲ್ಲದ ಸಮಾಜವಾದಿ ಅಭಿವೃದ್ಧಿ ಮಾರ್ಗಕ್ಕಾಗಿಯೇ ಎಡ ಪಕ್ಷಗಳು ಹೋರಾಡುತ್ತಿರುವುದು.

ಆದರೆ ಮಹಾತ್ಮಾಗಾಂಧಿಯ ಹಾಗೂ ಅವರ ಸತ್ಯ, ಅಹಿಂಸೆ ಮುಂತಾದ ಸಿದ್ಧಾಂತಗಳ ಅನುಯಾಯಿಗಳಾದ ರಾಷ್ಟ್ರೀಯ ಕಾಂಗ್ರೆಸ್ಸಿನ ನಾಯಕರೂ, ಸ್ವಾತಂತ್ರ್ಯ ನಂತರದ ಆಡಳಿತಗಾರರೂ ತಾವು ಬಂಡವಾಳ ಶಾಹಿ ಪದ್ಧತಿಯನ್ನು ಕಟ್ಟುತ್ತಿಲ್ಲ ಭಾರತಕ್ಕೆ ಹೊಂದುವ ಸಮಾಜವಾದವನ್ನೇ ಕಟ್ಟುತ್ತಿದ್ದೇವೆ ಎಂದು ಸುಳ್ಳು ಘೋಷಣೆ ಮಾಡುತ್ತಿದ್ದಾರೆ. ಬಂಡವಾಳ ಶಾಹಿ ಭೂ ಮಾಲಿಕರ ಹಿತವನ್ನೇ ಅವರು ಅನಿವಾರ್ಯವಾಗಿ ಪ್ರತಿನಿಧಿಕರಿಸುತ್ತಿದ್ದಾರೆಂಬುದು ಎಲ್ಲರಿಗೂ ತಿಳಿದ ವಿಷಯ ಆದರೆ ಅದನ್ನು ಹೇಳುವ ಸತ್ಯಸಂಧತೆ, ಪ್ರಾಮಾಣಿಕತೆಯಾಗಲಿ ಅವರಿಗಿಲ್ಲ.

ಶ್ರೀಮತಿ ಇಂದಿರಾಗಾಂಧಿಯ 'ಜಾಣತನ' ದಿಂದ ಹೊರಬರುವ ಮತ್ತೊಂದು ಪ್ರಶ್ನೆ ತನ್ನ ವಿದೇಶ ಧೋರಣೆ ತನ್ನ ಆಂತರಿಕ ಧೋರಣೆಯ ವಿಕಾಸವೇ ಹೊರತು ಬೇರೇನೂ ಅಲ್ಲ. ಆದ್ದರಿಂದ ತನ್ನ ಆಂತರಿಕ ಧೋರಣೆಯನ್ನು ವಿರೋಧಿಸುವ ಸಂಧರ್ಭದಲ್ಲೇ ತನ್ನ ವಿದೇಶ ಧೋರಣೆಗೆ ಬೆಂಬಲ ಸೂಚಿಸಲು ಕಮ್ಯೂನಿಸ್ಟರಿಗೆ ಹೇಗೆ ಸಾಧ್ಯವೆಂಬ 'ಗಹನ' ಪ್ರಶ್ನೆಯೇ ಅದು ಭಾರತ ಸರ್ಕಾರದ ವಿದೇಶ ಧೋರಣೆ ಅವರು ಅನುಸರಿಸುತ್ತಿರುವ ಆಂತರಿಕ ಧೋರಣೆಯ ವಿಸ್ತರಣೆಯೇ ಹೊರತು ಬೇರೇನೂ ಅಲ್ಲ. ಭಾರತದಲ್ಲಿ ಬಂಡವಾಳ ಶಾಹಿ ಪದ್ಧತಿಯನ್ನು ಕಟ್ಟುವುದು ಎಂಬ ಉದ್ದೇಶವೇ ಈ ಎರಡು ಧೋರಣೆಯಲ್ಲೂ ಅಡಗಿದೆಯೆಂದು ಶ್ರೀಮತಿ ಇಂದಿರಾ ಗಾಂಧಿಗೂ ಅವರ ಹಾಗೆ ಇರುವ ದೇಶ ಭಕ್ತರಿಗೂ ತಿಳಿಯಪಡಿಸಲು ನಮಗೆ ಹಿಂಜರಿಕೆಯೂ ಇಲ್ಲ. ಈ ವಿಷಯದಲ್ಲಿ ಯಾವ ವಿವಾದವೂ ಇಲ್ಲ.

ಬಂಡವಾಳಶಾಹಿ ವಿದೇಶ ಧೋರಣೆ

ಅಲಿಪ್ತ ನೀತಿ, ವಿಶ್ವಶಾಂತಿ, ಭಾರತ ಸೋವಿಯತ್ ಮೈತ್ರಿ, ಸಹಕಾರ, ಪಾಶ್ಚಾತ್ಯ ಬಂಡವಾಳ ಶಾಹಿ ರಾಷ್ಟ್ರಗಳಿಂದಲೂ, ಸಮಾಜವಾದಿ ರಾಷ್ಟ್ರಗಳಿಂದಲೂ ಸಹಾಯವನ್ನು ಸ್ವೀಕರಿಸುವುದು, ಒಂದು ಹೊಸ ಅಂತರ ರಾಷ್ಟ್ರೀಯ ಆರ್ಥಿಕ ವ್ಯವಸ್ಥೆಗಾಗಿ ಉತ್ತರ-ದಕ್ಷಿಣ ಸಂವಾದ ನಡೆಯಬೇಕೆಂಬ ಒಯುಕೆ, ರಾಷ್ಟ್ರೀಯ ರಾಜಕೀಯ ಸ್ವಾತಂತ್ರ್ಯವನ್ನು ರಕ್ಷಿಸಲಿಕ್ಕಾಗಿ ನಡೆಯುವ ಹೋರಾಟ ಈ ಧೋರಣೆಗಳ್ಯಾವೂ ಭಾರತದಲ್ಲಿ ಬಂಡವಾಳ ಶಾಹಿ ಪದ್ಧತಿಯನ್ನು ಕಟ್ಟಲು ಅನಿವಾರ್ಯವಾಗಿದೆ ಎಂಬ ಸತ್ಯವನ್ನು ಅಲ್ಲಗಳೆಯುವುದಿಲ್ಲ. ರಾಷ್ಟ್ರದಲ್ಲಿ ಬಂಡವಾಳ ಶಾಹಿ ಪದ್ಧತಿಯನ್ನು ಕಟ್ಟುವುದೆಂಬ ಆಂತರಿಕ ಧೋರಣೆಗೆ ಅನುಗುಣವಾದದ್ದೇ ಇಂತಹ ಒಂದು ವಿದೇಶ ಧೋರಣೆ ಅಲಿಪ್ತ ಚಳುವಳಿಗೂ ಅದರ ಗುರಿಯಾದ ರಾಷ್ಟ್ರೀಯ ಸ್ವಾತಂತ್ರ್ಯ, ಮಿಲಿಟರಿ ಕೂಟದಲ್ಲಿ ಸೇರದೇ ಇರುವುದು, ಸ್ವಾವಲಂಭಿಕೆಯ ಆರ್ಥಿಕ ವ್ಯವಸ್ಥೆಯನ್ನು ಕಟ್ಟಲು ನಡೆಸುವ ಹೋರಾಟಕ್ಕೆ ನಮ್ಮ ಹಾರ್ದಿಕ ಬೆಂಬಲವಿದೆ.

ಸೋವಿಯತ್ ಸಹಾಯದ ಬಗ್ಗೆ

ನಮ್ಮ ದೇಶದಲ್ಲಿ ಸೋವಿಯತ್ ನೆರವಿನಿಂದ ಕಟ್ಟುತ್ತಿರುವುದು ಸಮಾಜವಾದವಲ್ಲ, ಬೆಂಕೆಯಿಲ್ಲದ ಬಂಡವಾಳ ಪದ್ಧತಿಯೇ ಎಂಬ ವಿಷಯವನ್ನು ಅರಿತುಕೊಂಡೇ ಅನೇಕ ಮೂಲ ಹಾಗೂ ಪ್ರಮುಖ ಕೈಗಾರಿಕಾ ಉದ್ದಿಮೆಗಳನ್ನು ಸ್ಥಾಪಿಸಲು ಸೋವಿಯತ್ ಒಕ್ಕೂಟ ನೀಡುವ ಉದಾರ ಅನುಕೂಲ್ಯ ಸಹಾಯಕ್ಕೆ ಸಿ. ಪಿ. ಐ. (ಎಂ) ಹಾಗೂ ಸಿ. ಪಿ. ಐ ತನ್ನ ಬೆಂಬಲವನ್ನು ಸೂಚಿಸುತ್ತದೆ ಹೀಗಾಗಿ ಕಾಂಗ್ರೆಸ್ ನೇತೃತ್ವ ಕೈ ಗೊಂಡಿರುವ ಬಂಡವಾಳ ಶಾಹಿ ಬೆಳವಣಿಗೆಯ ಮಾರ್ಗವನ್ನು ವಿರೋಧಿಸುತ್ತಾ ನಾವು ಸಮಾಜವಾದಿ ರಾಷ್ಟ್ರಗಳ ಸಹಾಯವನ್ನೂ, ಭಾರತ–ಸೋವಿಯತ್ ಮೈತ್ರಿಯನ್ನೂ ಸ್ವಾಗತಿಸುತ್ತೇವೆ. ಆದರೂ 1955 ರ ನಂತರ ಕಳೆದ 29 ವರ್ಷಗಳಿಂದ ಲಭಿಸುತ್ತಾ ಇರುವ ಭಾರೀ ಸೋವಿಯತ್ ಸಹಾಯವಿದ್ದರೂ ಸಹ ನಮ್ಮ ಆರ್ಥಿಕ ಸ್ಥಿತಿಯು ಸ್ವಾವಲಂಬನೆಯಿಂದ ಬಹಳಷ್ಟು ದೂರವಿದ್ದೆ. ಅದಕ್ಕೆ ಕಾರಣ ಕಾಂಗ್ರೆಸ್ಸಿನ ಆಡಳಿತ ಮತ್ತು ಅವರು ಅನುಸರಿಸುತ್ತಿರುವ ದಿವಾಳಿ ಕೋರ ಬಂಡವಾಳ ಶಾಹಿ ಪದ್ಧತಿಯೇ ಹೊರತು ನಾವು ಕಾರಣವಲ್ಲ.

(ಉಳಿದ ಭಾಗ ಮುಂದಿನ ಸಂಚಿಕೆಯಲ್ಲಿ)

ಆಧಾರವಿಲ್ಲದ ಕಾಂಗ್ರೆ ಆರೋಪಗಳು - ಎಡರಂಗ ಸರಕಾರದ ಉತ್ತರ

ಕಲ್ಕತ್ತದಲ್ಲಿ ಎ ಐ ಸಿ. ಸಿ. ಸಮಾವೇಶ ಸೇರಿದಾಗ ಹಾಗೆಯೇ ಸಾರ್ವಜನಿಕ ಸಭೆಯಲ್ಲಿ ಇಂದಿರಾ ಗಾಂಧಿ ಮತ್ತು ಆಕೆಯ ಮಗ ರಾಜೀವ ಗಾಂಧಿಯವರುಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಾರ್ಟಿ ಮುಖಂಡತ್ವದ ಪಶ್ಚಿಮ ಬಂಗಾಲದ ಎಡರಂಗ ಸರಕಾರದ ಮೇಲೆ ವಿನಾಕಾರಣ ಆಧಾರವಿಲ್ಲದ ಆರೋಪಗಳನ್ನು ಹೇರಿದರು. ಸಾರ್ವಜನಿಕ ಪ್ರಚಾರದ ಸಲುವಾಗಿ ಮಾತ್ರ ಅಂಥ ಸುಳ್ಳು ಆರೋಪಗಳನ್ನು ಹೊರಿಸಲಾಗಿತ್ತಲ್ಲದೆ ಬೇರೆಯಾವ ಉದ್ದೇಶದಿಂದಲೂ ಅಲ್ಲ.

ಪಶ್ಚಿಮ ಬಂಗಾಲ ಎಲ್ಲ ಕ್ಷೇತ್ರಗಳಲ್ಲೂ ಹಿಂದುಳಿದಿದೆಂದು ಇಂದಿರಾ ಗಾಂಧಿಯವರ ಆರೋಪ ಈ ರಾಜ್ಯ ಯಾವಾಗಲೂ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳ ಕೇಂದ್ರವಾಗಿದ್ದುದರಿಂದ ಕೇಂದ್ರ ಸರಕಾರದ ತಪ್ಪು ಮತ್ತು ಅಪಾಯಕಾರಿಯಾದ ಕೇಂದ್ರದ ಯೋಜನೆಗಳೇ ಪಶ್ಚಿಮ ಬಂಗಾಲದ ಸಮಸ್ಯೆಗಳಿಗೆ ಮೂಲಕಾರಣವಾಗಿದೆ. ಎಡರಂಗದ ಸರಕಾರ ಅಧಿಕಾರದಲ್ಲಿರುವಾಗಲಷ್ಟೇ ಅಲ್ಲ ಅದಕ್ಕಿಂತ ಪೂರ್ವದಲ್ಲಿ ಕೂಡ ಕೇಂದ್ರ ಸರಕಾರ ಈ ರಾಜ್ಯದ ಕುರಿತು ಯಾವಾಗಲೂ ಮಲತಾಯಿ ಧೋರಣೆಯನ್ನೇ ಅನುಸರಿಸುತ್ತ ಬಂದು ಅನ್ಯಾಯ ಮಾಡಿದೆ.

ಆದರೂ ಕೂಡ ಈಗ ಪಶ್ಚಿಮ ಬಂಗಾಲ ಸರಕಾರ ಕೆಲಸಗಾರರ ನ್ಯಾಯವಾದ ಬೇಡಿಕೆಗಳಿಗೆ ಪರಿಹಾರ ಒದಗಿಸಿ ಕೊಟ್ಟಿರುವ ಕಾರಣದಿಂದಾಗಿ ಕೈಗಾರಿಕಾ ಶಾಂತಿ ಉಂಟಾಗಿ ಉದ್ಯಮಿಗಳಲ್ಲಿ ವಿಶ್ವಾಸವನ್ನುಂಟು ಮಾಡಿ, ಅವುಗಳ ಬೆಳವಣಿಗೆಗೆ ಸಹಾಯ ಮಾಡಿದೆ. 1977-78 ರಲ್ಲಿ 8,978 ಕೈಗಾರಿಕಾ ಘಟಕಗಳಿದ್ದು 1981 82 ರಲ್ಲಿ ಅದು 1,58,880 ರಷ್ಟಾಗಿದೆ. ಉದ್ಯೋಗಿಗಳ ಸಂಖ್ಯೆ 1977 78 ರಲ್ಲಿ 42,75,1 ಇದ್ದಿತ್ತು 1981 82 ರಲ್ಲಿ ಅದು 11,22,099 ರಷ್ಟಾಗಿದೆ.

ಹಾಗೆಯೇ ಗ್ರಾಮಾಂತರ ಪ್ರದೇಶದಲ್ಲಿ ಅತಿ ಹೆಚ್ಚು ಹಾನಿಕಾರಕವಾದ ನೆರೆಹಾವಳಿ ಬರಗಾಲ ಬಿದ್ದಿದ್ದರೂ ಕೂಡ 22 ಕೋಟಿ ಮನುಷ್ಯ ದುಡಿತದ ದಿನಗಳ ಮತ್ತು ಕೋಟ್ಯಾವಧಿ ರೂಪಾಯಿಯ ಉತ್ಪನ್ನ ಸಾಧಿಸಲಾಗಿದೆ ಹಿಂದಿನ ಕಾಲದಂತೆ ಜನರು ನಗರಗಳಿಗೆ ವಲಸೆ ಹೋಗಿಲ್ಲ ಪಾಲಿನಲ್ಲಿ ದುಡಿಯುತ್ತಿದ್ದ ರೈತರಿಗೆಲ್ಲ ಆಪರೇಶನ್ ಬರ್ಗಾ ಕ್ರಮದ ಮೂಲಕ ಅವರು ದುಡಿಯುತ್ತಿದ್ದ ಭೂಮಿಯ ಹಕ್ಕನ್ನು ಅವರಿಗೆ ಕೊಡಿಸಲಾಗಿದೆ. ಕೆಳ ಮಟ್ಟದಲ್ಲಿ ಪ್ರಜಾಪ್ರಭುತ್ವ ಬಲಪಡಿಸುವ ಉದ್ದೇಶದಿಂದ ಮೂರು ಘಟ್ಟದ ಪಂಚಾಯತ ಚುನಾವಣೆಗಳನ್ನು ಮಾಡಲಾಯಿತು, ಕಾಂಗ್ರೆಸ್ ಸರಕಾರ ಕಳೆದ 16 ವರ್ಷಗಳಿಂದ ಈ ಚುನಾವಣೆ ನಡೆಸಿರಲಿಲ್ಲ ನಿರುದ್ಯೋಗಿಗಳಿಗೆ ಭತ್ತೆ, ಮುದಿ ರೈತರಿಗೆ ಮತ್ತು ವಿಧವೆಯರಿಗೆ ಪೆನ್‌ಶನ್ ಮಂಜೂರು ಮಾಡಿ ಅವರ ಅವಶ್ಯಕತೆ ಕಡೆ ಗಮನಹರಿಸಿದೆ.

ಕಾಯಿದೆ—ಕಾನೂನು

ಪಶ್ಚಿಮ ಬಂಗಾಲದಲ್ಲಿಯ ಕಾಯಿದೆ ಕಾನೂನಿನ ವಿಷಯದಲ್ಲಿ ಇಂದಿರಾ ಗಾಂಧಿ ಮಗ ರಾಜೀವ ಗಾಂಧಿ ಬಹಳಷ್ಟು ಮಾತಾಡಿದ್ದಾರೆ. ಆದರೆ ಕಾಂಗ್ರೆಸ್ ಆಳುವ ರಾಜ್ಯಗಳಿಗಿಂತ ಪ. ಬಂಗಾಲದಲ್ಲಿ ಕಾಯಿದೆ-ಕಾನೂನು ಉತ್ತಮವಾಗಿದೆಂದು ಹೇಳಲು ಯಾರೂ ಕಷ್ಟ ಪಡಬೇಕಾಗಿಲ್ಲ.

ಉತ್ತರ ಪ್ರದೇಶ, ಬಿಹಾರ ಮಧ್ಯಪ್ರದೇಶಗಳಲ್ಲಿ ಕೊಲೆ ಸುಲಿಗೆಮಿತಿ ಮೀರಿದೆ. ಇತ್ತಿಚೆಗೆ ಕೇಂದ್ರ ಸರಕಾರದ ಗೃಹ ಶಾಖೆ ಹೊರಡಿಸಿರುವ ವರದಿ ಪ್ರಕಾರ ಇತರ ರಾಜ್ಯಗಳಲ್ಲಿ ಕಾನೂನು ವ್ಯವಸ್ಥೆ ಇಲ್ಲವೆಂಬ ಅಂಶ ಎದ್ದು ಕಾಣುತ್ತದೆ. ಹೆಂಗಸರ ಮಾನಭಂಗದಂಥ ಒಂದೇ ಗುನ್ಹೆಯನ್ನು ಪರಿಗಣಿಸಿದರೂ ಕೂಡ ಯು. ಪಿ. ಯಲ್ಲಿ 497, ಮುಂಬಯಿ ಬಿಟ್ಟು ಮಹಾರಾಷ್ಟ್ರದಲ್ಲಿ ಆಗಸ್ಟ ತಿಂಗಳತನಕ 336, ಜುಲೈ ತನಕ ರಾಜಸ್ಥಾನದಲ್ಲಿ 222, ಆಗಸ್ಟ ತನಕ ಬಿಹಾರದಲ್ಲಿ 212 ಪ್ರಕರಣಗಳಾದರೆ ಪ. ಬಂಗಾಲದಲ್ಲಿ ಬರೇ 92 ಮಾನಭಂಗದ ಪ್ರಕರಣಗಳಾಗಿವೆ. ಇತರ ರಾಜ್ಯಗಳಲ್ಲಿಯಂತೆ ಮಹಿಳೆಯರು, ಹರಿಜನರು. ಅಲ್ಪ ಸಂಖ್ಯಾಕರು, ಗಿರಿಜನರ ಮೇಲೆ ಯಾವತರದ ಅತ್ಯಾಚಾರಗಳೂ ನಡೆಯದಂತೆ ಕ್ರಮ ಕೈಕೊಳ್ಳಲಾಗಿದೆ. ಕಳೆದ 6 1/2ವರ್ಷಗಳ ಆಡಳಿತೆ ಪ ಬಂಗಾಲದ ಜನ ಜೀವನವನ್ನು ಒಂದು ಸಲಕೂಡ ಭೀತಿಗೊಳಪಡಿಸಿಲ್ಲ.

ರಾಷ್ಟ್ರೀಯ ಐಕ್ಯತೆಯನ್ನೂ ಸಮಗ್ರತೆಯನ್ನೂ ಈ ರಾಜ್ಯದ ಜನ ಎತ್ತಿ ಹಿಡಿದಿರುವುದರಿಂದಲೇ ಜಾತೀಯ ಕಲಹ, ದಂಗೆಗಳಾಗಿರುವುದಿಲ್ಲ ಕೆಲವು ರಾಜಕೀಯ ಕೊಲೆಗಳಾಗಿದ್ದರೂ ಕೂಡ ಕಾಂಗ್ರೆ ಒಳಗಿನ ಅಂತರಿಕ ಜಗಳದಿಂದಾಗಿಯೂ, ಎಡ ಪಕ್ಷಗಳ ಮೇಲೆ ಅವರು ನಡೆಸಿದ ಅತ್ಯಾಚಾರಗಳಿಂದಾಗಿಯೂ ಅವು ಆಗಿವೆ. ಇವುಗಳ ಕುರಿತು ಕೇಂದ್ರ ಸರಕಾರ ಕೇಳಿದ ಎಲ್ಲ ಪ್ರಶ್ನೆಗಳಿಗೂ ಸಮರ್ಪಕ ಉತ್ತರ ಕೊಡಲಾಗಿದೆ. ಸರಕಾರದ ಉತ್ತರವನ್ನು ಪತ್ರಿಕೆಗಳಿಗೂ ಬಿಡುಗಡೆ ಮಾಡಲಾಗಿದೆ ಕೆಲವು ಕಾಂಗ್ರೆ ಲೋಕಸಭೆ ಸದಸ್ಯರೂ ರಾಜ್ಯದಲ್ಲಿ ಸಂಚಾರಮಾಡಿ ಹೋಗಿದ್ದಾರೆ ಆದರೆ ಹೇಳಿಕೊಳ್ಳುವಂಥ ಯಾವ ಘಟನೆಯೂ ಅವರಿಗೆ ಸಿಗಲಿಲ್ಲ.

ಕಾರ್ಮಿಕರ ಚಳವಳಿಗಳಿಂದಾಗಿ ಕಾರ್ಖಾನೆಗಳೆಲ್ಲ ಮುಚ್ಚಲ್ಪಟ್ಟಿವೆ ಎಂಬ ಇಂದಿರಾ ಗಾಂಧಿಯ ಆರೋಪಕ್ಕೆ ಬ್ಯಾಂಕಿನವರು ಹೊರಡಿಸಿರುವ ವರದಿಯೇ ಉತ್ತರ ನೀಡುತ್ತದೆ. ಒರೇ ಶೇ 2 ರಷ್ಟು ಮಾತ್ರ ಕಾರ್ಮಿಕರ ತಂಟೆಗಳಿಂದಾಗಿ ಕೈಗಾರಿಕೆಗಳು ಮುಚ್ಚಲ್ಪಟ್ಟಿವೆಯೆಂದೂ ಶೇ 98 ರಷ್ಟು ಮುಚ್ಚುವಿಕೆ ಮಾಲಕರ ಮತ್ತು ಇತರ ಕಾರಣಗಳಿಂದಾಗಿದೆಯೆಂದು ಆ ವರದಿ ಹೇಳಿದೆ ಪೆಟ್ರೋ-ಕೆಮಿಕಲ್ಸ ಹಡಗ ಪೇರಿ ಕಟ್ಟೆ ಮೊದಲಾದ ಹೊಸ ಕೈಗಾರಿಕೆಗಳನ್ನು ಈ ರಾಜ್ಯದಲ್ಲಿ ಸ್ಥಾಪಿಸಲು ರಾಜಕಾರಣದಿಂದಾಗಿ ಕೇಂದ್ರ ಸರಕಾರ ನಿರಾಕರಿಸುತ್ತಿದೆ.

ಉತ್ಪನ್ನಗಳ ವಿನಿಯೋಗ

ಭಿಕ್ಷೆ ಪಾತ್ರೆಯನ್ನು ಹಿಡಿದುಕೊಂಡು ಪಶ್ಚಿಮ ಬಂಗಾಲ ಸರಕಾರ ಹಗಲೆಲ್ಲ ದಿಲ್ಲಿಗೆ ಹೋಗುತ್ತಿದೆಂಬ ರಾಜೀವ ಗಾಂಧಿಯವರ ಆರೋಪ ಸತ್ಯಕ್ಕೆದೂರವಾಗಿದೆ ಕೇಂದ್ರ ಸರಕಾರದ ಹಣ ಕಾಂಗ್ರೆಸ್ ಪಕ್ಷಕ್ಕೆ ಸೇರಿಲ್ಲ ನಮ್ಮ ದೇಶ ಫೆಡರಲ್ ಪದ್ಧತಿಯದ್ದಾಗಿದೆಂಬ ಅಂಶವನ್ನು ರಾಜೀವ ಗಾಂಧಿಯವರು ಮರೆತಂತೆ ಕಾಣುತ್ತದೆ. ಆ ಕಾರಣದಿಂದಲೇ ಈ ರಾಜ್ಯದ ಹಣದ ವ್ಯವಸ್ಥೆಯ ಕುರಿತು ಕ್ಷುಲ್ಲಕ ಭಾಷೆ ಉಪಯೋಗಿಸಿದ್ದಾರೆ. ಇತರ ರಾಜ್ಯಗಳಂತೆಯೇ ಪ ಬಂಗಾಲ ಸರಕಾರ ಕೂಡ ಕೇಂದ್ರದಿಂದ ತನಗೆ ಸಲ್ಲತಕ್ಕ ಆರ್ಥಿಕ ಪಾಲಿಗಾಗಿದಿಲ್ಲಿಗೆ ಹೋಗುತ್ತದೆ ಕಳೆದ ಆರೂವರೆ ವರ್ಷದಲ್ಲಿ ಕೇಂದ್ರ ಸರಕಾರ, ಆದಾಯತೆರಿಗೆ, ಎಕ್ಸೈಸ್ ಡ್ಯೂಟಿ ಮತ್ತು ಕಾರ್ಪೋರೇಶನ್ ಕರಗಳಿಂದ ರೂ 6 932 ಕೋಟಿ ಸಂಗ್ರಹಿಸಿದೆ ಆದರೆ ರಾಜ್ಯಕ್ಕೆ ಬರೇ ರೂ 1,533 ಕೋಟಿ ಸಂದಾಯ ಮಾಡಿದೆ. ಸಂಗ್ರಹಿಸಿದ್ದರಲ್ಲಿ ಶೇ 40 ರಷ್ಟು ರಾಜ್ಯ ಸರಕಾರಕ್ಕೆ ಸಲ್ಲಬೇಕೆಂಬ ನಿಯಮಕ್ಕೆ ಇದು ವ್ಯತಿರಿಕ್ತವಾಗಿದೆ. ಆದ್ದರಿಂದ ಪಶ್ಚಿಮ ಬಂಗಾಲ ಸರಕಾರವೇ ಕೇಂದ್ರಕ್ಕೆ ಹಣ ಸಹಾಯ ಮಾಡುತ್ತದಲ್ಲದೆ, ಕೇಂದ್ರವಲ್ಲ ಎಂಬ ಸಂಗತಿ ಇದರಿಂದ ಸ್ಪಷ್ಟವಾಗಿದೆ.

ಹಿಂದಿನ ಕಾಂಗ್ರೆಸ್ ಸರಕಾರ ಕೇಂದ್ರದಿಂದ ಸಾಲ ಪಡೆದಿದ್ದು ಅದನ್ನು ಮರುಪಾವತಿ ಮಾಡುವ ಜವಾಬ್ದಾರಿ ಎಡರಂಗ ಸರಕಾರದ ಮೇಲೆ ಬಿದ್ದಿರುವುದರಿಂದ ವಾರ್ಷಿಕ ಯೋಜನೆಗಳಿಗೆ ಹೆಚ್ಚು ಸಂಪನ್ಮೂಲ ಒದಗಿಸಲು ಸಾಧ್ಯವಾಗುತ್ತಿಲ್ಲ ಆದ್ದರಿಂದ ಹಿಂದಿನ ಕಾಂಗ್ರೆಸ್ ಸರಕಾರ ಬಿಟ್ಟು ಹೋಗಿರುವ ಸಾಲವನ್ನೆಲ್ಲ ಮನ್ನಾಮಾಡಬೇಕೆಂದು 8 ನೆಯ ಆರ್ಥಿಕ ಕಮಿಶನ್ ಅನ್ನು ಕೇಳಿಕೊಳ್ಳಲಾಗಿದೆ.

ಯೋಜನೇತರ ಖರ್ಚುಗಳಲ್ಲಿ ಕೆಲವು ಅತ್ಯವಶ್ಯವೆಂದು ರಾಜ್ಯ ಸರ್ಕಾರ ಅಭಿಪ್ರಾಯ ಪಟ್ಟಿದೆ. ಉದಾಹರಣೆಗಾಗಿ ಪ್ರಾಥಮಿಕ ಶಿಕ್ಷಣಕ್ಕಾಗಿ ಮಾಡುವ ಖರ್ಚು ಉತ್ಪಾದನೆಗಾಗಿ ದೆಂಬುದನ್ನು ಪರಿಗಣಿಸುವುದು ಅಗತ್ಯ. ಈ ವಿಷಯಕ್ಕಾಗಿ ರಾಜ್ಯ ಸರಕಾರ ರೂ 300 ಕೋಟಿ ಖರ್ಚು ಮಾಡಿರುವುದು ಅಭಿನಂದನೀಯ. ಈ ರಂಗಕ್ಕೆ ಹಾಗೆಯೇ ನೌಕರದಾರರ ಶಿಕ್ಷಕರ ಸಂಬಳಕ್ಕೆ ಮತ್ತು ಇದರಂತೆಯೇ ಹಿಂದಿನ ಕಾಂಗ್ರೆಸ್ ಆಡಳಿತೆಯಲ್ಲಿ ಕಡೆಗಣಿಸಲ್ಪಟ್ಟ ವರ್ಗಗಳ ಜನರಿಗೆ ಸಹಾಯ ಮಾಡುವುದಕ್ಕಾಗಿ ಯೋಜನೇತರ ಖರ್ಚು ಹೆಚ್ಚಿಸುವುದು ಅತ್ಯಗತ್ಯ ಪ. ಬಂಗಾಲದಲ್ಲಿ ಕರಭಾರ ಅತಿ ಕಡಿಮೆಯಾಗಿದೆ ಜನರ ಜೀವನ ಮಟ್ಟ ಕೂಡ ಇತರ ರಾಜ್ಯಗಳಿಗಿಂತ ಉತ್ತಮವಾಗಿದೆ.

ಶಿಕ್ಷಣಕ್ಕೆ ಹೆಚ್ಚು ಗಮನ

ಕಳೆದ 6 1/2 ವರ್ಷಗಳಲ್ಲಿ 13 ಕ್ಲಾಸಿನ ವರೆಗೆ ಪುಕ್ಕಟೆ ಶಿಕ್ಷಣ ಒದಗಿಸಲಾಗಿದೆ. 5ನೆಯ ಇಯತ್ತೆ ವರೆಗೆ ಪುಕ್ಕಟೆ ಪುಸ್ತಕ ವಿತರಣೆ ಮಾಡಲಾಗುತ್ತಿದೆ. ಶಿಕ್ಷಕರ ವೇತನ ಹೆಚ್ಚಿಸಿರುವುದಲ್ಲದೆ, ಹಲವಾರು ಶಾಲೆಗಳನ್ನು, ಕೆಲವು ಹೊಸ ಕಾಲೇಜುಗಳನ್ನು ಸ್ಥಾಪಿಸಲಾಗಿದೆ. 1976-77 ರಲ್ಲಿ ಕಾಂಗ್ರೆಸ್ ಅಧಿಕಾರ ದಲ್ಲಿದ್ದಾಗ ಶಿಕ್ಷಣಕ್ಕಾಗಿ ರೂ 112 ಕೋಟಿ ಅಂದಾಜು ಮಾಡಲಾಗಿತ್ತು. 1983-84 ರಲ್ಲಿ ಎಡರಂಗ ಸರಕಾರ ಶಿಕ್ಷಣಕ್ಕಾಗಿ ರೂ 418 ಕೋಟಿ ವಿನಿಯೋಗಿಸಿದೆ 1972 ರಿಂದ 1977 ನೇ ತಿಂಗಳ ವರೆಗೆ ಕಾಂಗ್ರೆಸ್ ಅಧಿಕಾರದಲ್ಲಿದ್ದಾಗ ಶಿಕ್ಷಣ ಕ್ಷೇತ್ರದಲ್ಲಿದ್ದ ದುಂದುಗಾರಿಕೆ ಭ್ರಷ್ಟಾಚಾರ, ಗೊಂದಲಗಳು ಈಗ ಸಂಪೂರ್ಣ ನಿಂತು ಹೋಗಿರುವುದನ್ನು ಕಾಣಬಹುದು ಪಠ್ಯ ಪುಸ್ತಕಗಳಲ್ಲಿಯೂ ಬದಲಾವಣೆ ಮಾಡಲಾಗಿದೆ.

ಆದ್ದರಿಂದ ಕಾಂಗ್ರೆಸ್ ಮಾಡುತ್ತಿರುವ ಅಪಪ್ರಚಾರ ರಾಜಕೀಯದ್ದಾಗಿದೆ ಅರ್ಥ ಹೀನವಾಗಿದೆ ಇಂಥ ಅಪಪ್ರಚಾರವನ್ನು ಬಹಿರಂಗಗೊಳಿಸಿ ಜನರಿಗೆ ನಿಜ ಸಂಗತಿ ತಿಳಿಸುವುದಕ್ಕೆ ಅಗ್ರಪ್ರಾಶಸ್ತ್ಯ ನೀಡಬೇಕಾಗಿದೆ.

ಕೇಂದ್ರ ಸರ್ಕಾರದ ನೀತಿಯನ್ನು ಬದಲಾಯಿಸಲು

ಸಂಘಟಿತ ಕಾರ್ಮಿಕರ ಒತ್ತಾಯ

ಕಳೆದ ಜನವರಿ 24 ರಂದು ಕೇಂದ್ರ ಅರ್ಥ ಸಚಿವರು ಕೇಂದ್ರ ಕಾರ್ಮಿಕ ನಾಯಕ ರೊಡನೆ ಬಜೆಟ್ಟಿನ ಪೂರ್ವಭಾವಿ ಚರ್ಚೆಯನ್ನು ನಡೆಸಿದರು ಎ ಐ ಟಿ. ಯು. ಸಿ, ಐ ಎನ್. ಟಿ ಯು ಸಿ, ಹೆಚ್. ಎಂ. ಎಸ್, ಬಿ. ಎ. ಸ್., ಯು ಟಿ. ಯು. ಸಿ. ಯ ನಾಯಕರೂ, ಸಿ. ಐ. ಟಿ. ಯುವನ್ನು ಪ್ರತಿನಿಧೀಕರಿಸಿ ಕಾ. ನೃಸಿಂಗ ಚಕ್ರವರ್ತಿ ಭಾಗವಹಿಸಿದ್ದರು.

ದೇಶದಲ್ಲಿ ಹೆಚ್ಚಿನ ಉತ್ಪಾದನೆಯಾಗಿದ್ದು ಬೆಲೆ ಏರುತ್ತಿರುವುದರ ಬಗ್ಗೆ ಹಾಗೂ ಇತರ ಸಮಸ್ಯೆಗಳ ಬಗ್ಗೆ ಸಚಿವರು ತನ್ನ ಸಾಂಪ್ರದಾಯಕ ಕಳವಳವನ್ನು ವ್ಯಕ್ತ ಪಡಿಸಿ ಚರ್ಚೆಯನ್ನು ಆರಂಭಿಸಿದರು.

ಪ್ರತಿನಿತ್ಯ ಬಳಕೆಯ ಆಹಾರ ಪದಾರ್ಥಗಳ ಬೆಲೆ ಏರಿಕೆ, ವಿದ್ಯುಚ್ಛಕ್ತಿ ಉತ್ಪಾದನೆಯಲ್ಲಿ ಉಂಟಾದ ವೈಫಲ್ಯ ಅದರ ಫಲವಾಗಿ ಕಾರ್ಮಿಕರ ವೇತನದಲ್ಲಿ ಕಡಿತ ಇವೆಲ್ಲವೂ ಕಾರ್ಮಿಕರ ಸಂಘಗಳ ನಾಯಕರ ಉಗ್ರ ಟೀಕೆಗೆ ಗುರಿಯಾಯಿತು. ಪ್ರತಿನಿತ್ಯ ಉಪಯೋಗಿಸುವ ಆಹಾರ ಪದಾರ್ಥಗಳನ್ನು ಸಾರ್ವಜನಿಕ ವಿತರಣಾ ವ್ಯವಸ್ಥೆಯ ಮೂಲಕ ಸರಬರಾಜು ಮಾಡುವಂತೆ ಎಲ್ಲಾ ನಾಯಕರೂ ಒತ್ತಾಯ ಪಡಿಸಿದರ.

ನವೀನ ತಾಂತ್ರಿಕ ಯಂತ್ರಗಳನ್ನು ಬಳಸುವ ಮೂಲಕ ಕಾರ್ಮಿಕರನ್ನು ಕೆಲಸದಿಂದ ತೆಗೆದು ಹಾಕುವ ಅಪಾಯವನ್ನು ಸರ್ಕಾರದ ಗಮನಕ್ಕೆ ತಂದರು.

ಸಿ. ಐ. ಟಿ, ಯುವನ್ನು ಪ್ರತಿನಿಧೀಕರಿಸಿ ಮಾತನಾಡಿದ ಕಾ ನೃಸಿಂಗ ಚಕ್ರವರ್ತಿಯವರು ಕೇಂದ್ರ ಸರ್ಕಾರದ ಪರೋಕ್ಷ ತೆರಿಗೆ, ಜೋತಾ ಕಣ, ಅಬಕಾರಿ ಸುಂಕ ಇವುಗಳೇ ಬೆಲೆ ಏರಿಕೆಗೆ ಮುಖ್ಯ ಕಾರಣವೆಂದರು ಈ ನೀತಿಯನ್ನು ಬದಲಾವಣೆ ಮಾಡಿದರೆ ಮಾತ್ರ ಸ್ವಲ್ಪ ಮಟ್ಟಿಗಾದರೂ ಬೆಲೆಯೇರಿಕೆಯನ್ನು ತಡೆ ಗಟ್ಟಬಹುದೆಂದರು. ಜನ ಸಾಮಾನ್ಯರಿಗೆ ಪರಿಹಾರವಾಗುವ ಅಂಶಗಳನ್ನು ಬಜೆಟ್ಟಿನಲ್ಲಿ ತರುವಂತೆ ಒತ್ತಾಯ ಪಡಿಸಿದರು. ಅಸ್ವಸ್ಥ ಕೈಗಾರಿಕೆಗಳು, ಬೀಗ ಮುದ್ರೆ, ಕೈಗಾರಿಕೆಗಳನ್ನು ಮುಚ್ಚುವುದು ಮತ್ತು ಕಾರ್ಮಿಕರನ್ನು ಕೆಲಸದಿಂದ ತೆಗೆದು ಹಾಕುತ್ತಿರುವ ಈ ಗಂಭೀರ ಪರಿಸ್ಥಿತಿಯನ್ನು ಸರ್ಕಾರದ ಗಮನಕ್ಕೆ ತಂದರು.

ಕೇಂದ್ರ ಸರ್ಕಾರಿ ನೌಕರರ ತುಟ್ಟಿ ಭತ್ಯೆಯ ಮೂರು ಕಂತುಗಳನ್ನು ಕೂಡಲೆ ಪಾವತಿ ಮಾಡುವಂತೆಯೂ ಮತ್ತು ಸಾರ್ವಜನಿಕ ಕ್ಷೇತ್ರದ ನೌಕರರ ತುಟ್ಟಿ ಭತ್ಯೆಯ ಸಮಸ್ಯೆಯನ್ನು ತಡ ಮಾಡದೆ ಇತ್ಯರ್ಥ ಮಾಡುವಂತೆಯೂ ಒತ್ತಾಯ ಮಾಡಿದರು.

ದೇಶವನ್ನು ಕಾಡುವ ಮತ್ತೊಂದು ಗಂಭೀರ ಪ್ರಶ್ನೆ ನಿರುದ್ಯೋಗ ಸಮಸ್ಯೆ. ನಿರುದ್ಯೋಗ ಭತ್ಯೆಯನ್ನು ಜಾರಿ ಮಾಡುವಂತೆಯೂ, ಕೆಲಸದ ಹಕ್ಕನ್ನು ಸಂವಿಧಾನದ ಮೂಲಭೂತ ಹಕ್ಕನ್ನಾಗಿ ಮಾಡಿದರೆ ಇಂದಿನ ನವೀನ ತಾಂತ್ರಿಕ ಉಪಕರಣಗಳನ್ನು ಬಳಸುವುದರ ಮೂಲಕ ಹೆಚ್ಚುವ ನಿರುದ್ಯೋಗ ಸಮಸ್ಯೆಗೆ ಸ್ವಲ್ಪ ಮಟ್ಟಿಗೆ ಕಡಿವಾಣ ಹಾಕ ಬಹುದೆಂದು ಹೇಳಿದರು. ಸರ್ಕಾರಿ ಹಣವನ್ನು ದುರ್ವ್ಯಯ ಮಾಡುತ್ತಿರುವ ಸುಮಾರು ನೂರಕ್ಕೂ ಹೆಚ್ಚಿನ ಖಾಸಗಿ ಸಂಸ್ಥೆಗಳನ್ನು ರಾಷ್ಟ್ರೀಕರಣ ಮಾಡುವುದಕ್ಕೆ ಕಾ ನೃಸಿಂಗ ಚಕ್ರವರ್ತಿ ಒತ್ತಾಯ ಮಾಡಿದರು

ರಾಷ್ಟ್ರೀಕರಣದಿಂದ ಸಮಸ್ಯೆಯ ಪರಿಹಾರ ವಾಗುವುದಿಲ್ಲವೆಂದೂ ಇಲ್ಲಿನ ಸಾಮಾಜಿಕ- ಆರ್ಥಿಕ ವ್ಯವಸ್ಥೆಯು ವ್ಯತ್ಯಸ್ತವಾಗಿರುವುದರಿಂದ ಈ ಸಮಸ್ಯೆಗಳನ್ನು ಬಗೆಹರಿಸಲು ಪ್ರಯತ್ನ ಪಡುತ್ತಿನೆ ಎಂದು ಉತ್ತರಿಸುತ್ತಾ ಕೇಂದ್ರ ಸಚಿವರು ಸಭೆಯನ್ನು ಮುಕ್ತಾಯಗೊಳಿಸಿದರು

ಆಂಧ್ರ ಪ್ರದೇಶದ ಕಾರ್ಮಿಕರ ಯಶಸ್ವೀ ಹೋರಾಟಗಳು

ಕಳೆದ ಕೆಲವು ತಿಂಗಳುಗಳಲ್ಲಿ ಆಂಧ್ರ ಪ್ರದೇಶದ ಅನೇಕ ಕೈಗಾರಿಕಾ ಉದ್ಯಮಗಳ, ಕಾರ್ಖಾನೆಗಳ ಹಾಗೂ ಇತರ ಕ್ಷೇತ್ರಗಳಲ್ಲಿ ಕಾರ್ಮಿಕರು ನಡೆಸಿದ ಒಟ್ಟು ಹೋರಾಟದ ಫಲವಾಗಿ ಗಣನೀಯವಾದ ಯಶಸ್ಸಿಯನ್ನು ಗಳಿಸಿದೆ.

ಪಶ್ಚಿಮ ಗೋದಾವರಿ ಜಿಲ್ಲೆಯ ಅಕಿ ನೀಡಿನ ಕಾಗದವನ್ನು ತಯಾರಿಸುವ ಕಾರ್ಖಾನೆಯ ಕಾರ್ಮಿಕರು 166 ದಿನಗಳು ಮುಷ್ಕರವನ್ನು ಮಾಡಿದರು. ಕಳೆದ ನವಂಬರ್ 30 ರಂದು ಕಾರ್ಮಿಕ ಸಂಘ ಹಾಗೂ ಮಾಲಿಕರ ಮಧ್ಯೆ ನಡೆದ ಒಪ್ಪಂದದ ಪ್ರಕಾರ ವೇತನದಲ್ಲಿ 40 ರೂಗಳ ಹೆಚ್ಚಳ, 6 ರೂಪಾಯಿಗಳ ವಾರ್ಷಿಕ ಹೆಚ್ಚಳ, ಶೇ. 33 ಬೋನಸ್, 22 ದಿನಗಳ ವಾರ್ಷಿಕ ರಜಾ ಹಾಗೂ 12 ದಿನಗಳ ರಜ, ಮುಷ್ಕರದ ದಿನಗಳನ್ನು ಸೇವಾ ದಿನಗಳಾಗಿಯೂ ಮತ್ತು ಪ್ರತಿಯೊಬ್ಬ ಕಾರ್ಮಿಕನಿಗೂ ರೂ. 300 ಲಭಿಸಿತು.

ನಂದ್ಯಾಲ್‌ನ ಟೆಲ್ ಮಿಂಡ್ ಕೇಬಲ್ ನೌಕರರು 70 ದಿನಗಳ ಧೀರ ಮುಷ್ಕರದ ನಂತರ ಮಾಲಿಕರೊಡನೆ ಒಪ್ಪಂದವಾಯಿತು. ಇದರ ಪ್ರಕಾರ ಶೇ. 17 ಬೋನಸ್ಸ್, ಸಂಬಳದಲ್ಲಿ 20 ರೂಗಳ ಹೆಚ್ಚಳ. ಮುಷ್ಕರ ಕಾಲದಲ್ಲಿ ಶೇ 35 ರಷ್ಟು ವೇತನ ಕೊಡುವ ಒಪ್ಪಂದ ಉಂಟಾಯಿತು.

ಕರ್ನೂಲಿನ ಎ. ಪಿ ಕಾರ್ಬೈಡ್ ಕಾರ್ಮಿಕರು ಮಾಲಿಕರೊಡನೆ ಮಾಡಿಕೊಂಡ ಒಪ್ಪಂದದ ಪ್ರಕಾರ ವೇತನವು 200 ರೂ ಗಳಿಂದ 300 ಕ್ಕೆ ಹೆಚ್ಚಿತು ಅಲ್ಲಿನ ಕಾರ್ಮಿಕರು ಸಿ ಐ ಟಿ ಯುವಿನ ಜಿಲ್ಲಾ ಸಮಿತಿಗೆ 9345 ರೂಗಳನ್ನೂ, ರಾಜ್ಯ ಸಮಿತಿಗೆ 1000 ರೂಗಳನ್ನು ಕೊಟ್ಟರು.

ವಿಶಾಖ ಪಟ್ಟಣದ ಹಿಂದುಸ್ತಾನ್ ಝಿಂಕ್ ಸ್ಮೆಲ್ಟರ್ಸ್‌ನ ಕಾರ್ಮಿಕರು ಅವರ ಮಾಲಿಕರೊಡನೆ ಒಂದು ಒಪ್ಪಂದವನ್ನು ಮಾಡಿಕೊಂಡರು ಈ ವೇತನ ಪರಿಷ್ಕಾರದಿಂದ ಸಂಬಳದಲ್ಲಿ 150 ರೂಗಳಿಂದ 225 ರೂಗಳ ಹೆಚ್ಚಳವಾಯಿತು, ಮನೆ ಬಾಡಿಗೆ ಭತ್ಯೆ ಶೇ. 15 ರಷ್ಟು ಮತ್ತು 30 ರೂಗಳ ತಿಂಗಳ ಬೋನಸ್ಸು ಒಟ್ಟು ಸೇರಿ ಒಟ್ಟು ವೇತನ ಶೇ. 15 ರಿಂದ 18 ರವರೆಗೆ ಹೆಚ್ಚಿತು.

ಮುಷ್ಕರ ಮತ್ತು ಧರಣಿ ಸತ್ಯಾಗ್ರಹಗಳು

ಪಲಕೋಲ್ ಸಕ್ಕರೆ ಕಾರ್ಖಾನೆಯ ಕಾರ್ಮಿಕರು ಮಾಲಿಕರ ಲೇ-ಆಫ್ ವಿರುದ್ಧ ನಡೆಸಿದ ಯಶಸ್ವೀ ಧರಣಿ ಮುಷ್ಕರದ ಫಲವಾಗಿ ಲೇ-ಆಫ್‌ನು ಕೈಬಿಡ ಬೇಕಾಯಿತು

ನಲಗೊಂಡದ ರಸ್ತೆ ಸಾರಿಗೆ ಸಂಸ್ಥೆಯು ಇಬ್ಬರು ಕಾರ್ಮಿಕರನ್ನು ಅನ್ಯಾಯ ವರ್ಗಾವಣೆ ಮಾಡಿದ್ದರ ವಿರುದ್ಧವಾಗಿ ನಡೆಸಿದ ಮುಷ್ಕರದ ಫಲವಾಗಿ ಆಡಳಿತ ವರ್ಗವು ಕಾರ್ಮಿಕರೊಡನೆ ಒಂದು ಒಪ್ಪಂದವನ್ನು ಮಾಡ ಬೇಕಾಯಿತು.

ರಾಷ್ಟ್ರೀಯ ಚಳುವಳಿ ಸಮಿತಿಯು ಲೇ.ಆಫ್, ಕೈಗಾರಿಕೆಯನ್ನು ಮುಚ್ಚುವುದು, ಬೀಗ ಮುದ್ರೆ, ಕೆಲಸದಿಂದ ತೆಗೆದು ಹಾಕುವುದು ಮುಂತಾದ ಕಾರ್ಮಿಕ ವಿರೋಧಿ ನೀತಿಯ ವಿರುದ್ಧ ಕೊಟ್ಟ ಕರೆಯ ಮೇರೆ ಆಂಧ್ರ ಪ್ರದೇಶದಾದ್ಯಂತ ಪ್ರತಿಭಟನಾ ಮೆರವಣಿಗೆಗಳು ನಡೆಯಿತು.

ಎಲ್. ಐ. ಸಿ ಯನ್ನು ವಿಭಜಿಸುವ ಕೇಂದ್ರ ನೀತಿಯ ವಿರುದ್ಧವಾಗಿಯೂ ಮೆರವಣಿಗೆ, ಪ್ರತಿಭಟನೆ ನಡೆಯಿತು.

ಬಂಟ್ವಾಳದಲ್ಲಿ ಟ್ಯಾಕ್ಸಿ ಡ್ರೈವರ್‌ಗಳ ಸಭೆ

ಮೋಟರ್ ಟ್ರಾನ್ಸ್‌ಪೋರ್ಟ್ ಎಂಡ್ ಇಂಜಿನಿಯರಿಂಗ್ ವರ್ಕರ್ಸ್ ಯೂನಿಯನಿನ (ಸಿ. ಐ. ಟಿ. ಯು) ಆಶ್ರಯದಲ್ಲಿ ಬಂಟ್ವಾಳದ ಟ್ಯಾಕ್ಸಿ ಡ್ರೈವರ್ಸ್‌ಗಳ ಸಭೆಯು ತಾ|| 12-2-84 ರಂದು ಬಂಟ್ವಾಳದ ಯಶವಂತ ವ್ಯಾಯಾಮ ಶಾಲೆಯಲ್ಲಿ ಜರಗಿತು. ಸಭೆಯಲ್ಲಿ ಸಿ. ಐ ಟಿ ಯು, ಉಪಾಧ್ಯಕ್ಷರಾದ ಶ್ರೀ ಟಿ. ಮಾಧವನವರು, ಯೂನಿಯನಿನ ಜತೆ ಕಾರ್ಯದರ್ಶಿ ಶ್ರೀ ಪಿ. ಉಮೇಶ್ ಭಂಡಾರಿ ಯೂನಿಯನ ಪ್ರಧಾನ ಕಾರ್ಯದರ್ಶಿ ಕೆ. ಮೂಸಬ್ಬ ಮೊದಲಾದವರು ಮಾತಾಡಿ ಜನಸಾಮಾನ್ಯರ ಜೀವನದಲ್ಲಿ ಸಾರಿಗೆ ಕೆಲಸಗಾರರ ಪಾತ್ರ ಮತ್ತು ಅವರು ಎದುರಿಸುತ್ತಿರುವ ಸಮಸ್ಯೆಗಳನ್ನು ವಿವರಿಸಿ ಕಾನೂನಿನ ಹೆಸರಿನಲ್ಲಿ ಪೋಲೀಸರು ಸಾರಿಗೆ ಕೆಲಸಗಾರರಿಗೆ ಕೊಡುವ ನಿತ್ಯ ಕಿರುಕುಳಗಳನ್ನು ವಿವರಿಸಿದರು

ಈ ರೀತಿಯ ವರ್ತನೆಯನ್ನು ಸಂಘಟಿತ ಚಳವಳಿಯ ಮೂಲಕ ನಿಲ್ಲಿಸಬೇಕೆಂದು ಕರೆ ನೀಡಿದರು.

ಸಭೆಯಲ್ಲಿ ಪೋಲಿಸ್ ಕಿರುಕುಳದ ಬಗ್ಗೆ ನಿರ್ಣಯವೊಂದನ್ನು ಅಂಗೀಕರಿಸಿ ಇಲ್ಲಿಯ ಪೋಲೀಸ್ ಸಬ್-ಇನ್ಸ್‌ಪೆಕ್ಟರ್‌ರವರು ಡ್ರೈವರ್‌ಗಳೊಂದಿಗೆ ಅನುಚಿತವಾಗಿ ವರ್ತಿಸುವುದನ್ನು ನಿಲ್ಲಿಸಬೇಕು, ಮತ್ತು ಪೋಲಿಸ್ ಕಿರುಕುಳದ ಬಗ್ಗೆ ಸಂಬಂಧ ಪಟ್ಟ ಅಧಿಕಾರಿಗಳಿಗೆ ಮನವಿ ಅರ್ಪಿಸುವುದು ಮತ್ತು ಅಗತ್ಯವಾದರೆ ಈ ಬಗ್ಗೆ ಹೋರಾಟವನ್ನು ನಡೆಸಲು ತೀರ್ಮಾನಿಸಲಾಯಿತು ಸಭೆಯಲ್ಲಿ ಬಂಟ್ವಾಳದ ಸಿ ಐ ಟಿ. ಯು. ಮುಖಂಡರಾದ ಶ್ರೀ ವಾಸುಗಟ್ಟಿ ಶ್ರೀ ಸಂಜೀವ ಬಂಗೇರ ಮೊದಲಾದವರು ಮಾತಾನಾಡಿದರು

ಶ್ರೀ ಪ್ರಭಾಕರನವರು ಸಂಚಾಲಕರಾಗಿರುವ 11 ಮಂದಿಯ ಪ್ರದೇಶ ಸಮಿತಿಯನ್ನು ರಚಿಸಲಾಯಿತು. ಸಭೆಯ ಅಧ್ಯಕ್ಷತೆಯನ್ನು ಶ್ರೀ ಕೃಷ್ಣ ಪ್ರಭು ರವರು ವಹಿಸಿದ್ದರು. ಪ್ರಾರಂಭದಲ್ಲಿ ಶ್ರೀ ಮಂಜುನಾಥ ಸಫಲ್ಯನವರು ಸ್ವಾಗತಿಸಿದರು ಕೊನೆಯಲ್ಲಿ ಶ್ರೀ ಪ್ರಭಾಕರವರು ವಂದಿಸಿದರು.

ಸಿ. ಪಿ. ಐ. (ಎಂ) ಪಶ್ಚಿಮ ಬಂಗಾಲ ಸಮಿತಿಯ ಕಾರ್ಯದರ್ಶಿ ಸರೋಜ್ ಮುಖರ್ಜಿಯವರ ಪ್ರಕಟಣೆ

ಪಾರ್ಟಿಯೊಳಗಿನ ಕಾರ್ಮಿಕ ವಿರೋಧಿಯಾದ ವಿಚಾರ ಸರಣಿಯನ್ನು ತೆಗೆದು ಹಾಕುವ ಸಲುವಾಗಿ ಮತ್ತು, ಪಾರ್ಟಿ ಸದಸ್ಯರಲ್ಲಿರುವ ಭ್ರಷ್ಟಾಚಾರ, ಇತರ ದುರ್ಗುಣಗಳ ವಿರುದ್ಧ ಹೋರಾಡಲು ನಮ್ಮ ಪಕ್ಷ ಪಶ್ಚಿಮ ಬಂಗಾಲದಲ್ಲಿ ಕಳೆದ ಒಂದು ವರ್ಷದಿಂದ ತಿದ್ದುಪಡಿಯ ಕಾರ್ಯ ಕೈ ಗೊಂಡಿದೆ. ಬರ್ದವಾನ ಜಿಲ್ಲಾ ಕಮಿಟಿಯು ಈ ಕಾರ್ಯಕ್ರಮವನ್ನು ಯಶಸ್ವಿಯಾಗಿ ನೆರವೇರಿಸಿತು. ಅಂಥ ದುರ್ಗುಣಗಳಿರುವವರ ಮೇಲೆ ಶಿಸ್ತಿನ ಕ್ರಮ ಕೈಗೊಂಡಿತು. ಆದರೆ ಈ ಜಿಲ್ಲೆಯಲ್ಲಿ ಅಂಥ ಪ್ರಕರಣಗಳು ಕಡಿಮೆಯಿದ್ದವು ಎರಡು ಪ್ರಕರಣಗಳಷ್ಟೇ ಜಿಲ್ಲಾ ಕೇಂದ್ರಕ್ಕೆ ಬಂದಿದ್ದು ಅವುಗಳ ಮೇಲೆ ಯೋಗ್ಯ ಕ್ರಮ ತೆಗೆದು ಕೊಳ್ಳಲಾಗಿದೆ.

ಅದೇ ಸಮಯದಲ್ಲಿ ಜಿಲ್ಲಾ ಸಮಿತಿ, ಜಿಲ್ಲಾ ಸಮಿತಿ ಸದಸ್ಯರು ಇತರ ಪ್ರಮುಖ ಕಾರ್ಯಕರ್ತರು. ಜನರಿಂದ ಆರಿಸಿ ಹೋದ ಪ್ರತಿನಿಧಿಗಳು ಹಾಗೆಯೇ ಆಡಳಿತಾಧಿಕಾರಿಗಳಾಗಿ ಕೆಲಸ ಮಾಡುವ ಸಂಗಾತಿಗಳ ವಿಷಯದಲ್ಲಿ ಪೂರ್ಣ ಚೌಕಾಶಿ ನಡೆಸಿತು ಇಂಥ ಚೌಕಾಶಿ ನಡೆದಾಗ ಶಾಸಕರಾದ ಲಕ್ಷ್ಮೀ ಶಾಹ ಅವರ ಮೇಲೆ ತಕರಾರುಗಳು ಡಿಸಿಗೆ ಬಂದವು. ಜಿಲ್ಲಾ ಸಮಿತಿ ಆ ಕಾಮ್ರೇಡರಿಗೆ ಆರೋಪಪಟ್ಟಿ ಸಲ್ಲಿಸಿ ವಿಚಾರಣೆ ನಡೆಸಿದಾಗ 1) ಶಾಸಕರಾಗಿ ಪಾರ್ಟಿಗೆ ಸಲ್ಲತಕ್ಕ ಲೆವಿಯನು ಕೊಡುತ್ತಿಲ್ಲೆಂದೂ 2) ಜನರಲ್ಲಿ ಕಮ್ಯೂನಿಸ್ಟೇತರ ಮತ್ತು ಧಿಮಾಕಿನ ನಡತೆಯನ್ನು ಪ್ರದರ್ಶಿಸುತ್ತಿದ್ದರೆಂದೂ. 3) ಪಾರ್ಟಿಯ ಆದೇಶಗಳನ್ನು ಪಾಲಿಸುತ್ತಿದ್ದಿಲ್ಲೆಂದೂ 4) ಪಾರ್ಟಿ ಶಿಸ್ತನ್ನು ಮುರಿಯುತ್ತಿದ್ದರೆಂದೂ ತಿಳಿದು ಬಂತು.

ಇವರನ್ನು ಪಾರ್ಟಿಯಿಂದ ತೆಗೆದು ಹಾಕ ಬೇಕೆಂದೂ ಡಿ.ಸಿ. ಶಿಫಾರಸ್ ಮಾಡಿತು ಬರ್ದವಾನ್ ಜಿಲಾ ಕಮಿಟಿಯ ನಿರ್ಣಯವನ್ನು ರಾಜ್ಯ ಸಮಿತಿಯು ಒಪ್ಪಿಕೊಂಡು ಕಂಕಸಾ (ಮೀಸಲಾತಿ) ಕ್ಷೇತ್ರದ ಶಾಸಕರಾದ ಲಕ್ಷ್ಮೀ ಶಾಹ ಇವರನ್ನು ಪಾರ್ಟಿಯಿಂದ ಹೊರಗೆ ಹಾಕಿದೆ ಇವರು ಪಶ್ಚಿಮ ಬಂಗಾಲ ವಿಧಾನ ಸಭೆಯ ಸದಸ್ಯತ್ವಕ್ಕೆ ರಾಜೀನಾಮೆ ಕೊಡ ಬೇಕೆಂದು ಕೇಳಿಕೊಂಡಿದೆ.

ವಿದ್ಯುಚ್ಛಕ್ತಿ ಕೆಲಸಗಾರರ ಅಖಿಲಭಾರತ ಫೆಡರೇಶನ್ ರಚನೆ

ಪಶ್ಚಿಮ ಬಂಗಾಲ, ತ್ರಿಪುರ, ಅಸ್ಸಾಂ, ಮಹಾರಾಷ್ಟ್ರ, ಬಿಹಾರ, ತಮಿಳು ನಾಡು, ರಾಜಸ್ಥಾನ, ಮಧ್ಯ ಪ್ರದೇಶ, ದಿಲ್ಲಿ, ಹರಿಯಾಣ, ಪಂಜಾಬ, ಕೇರಳ ಮತ್ತು ಪಾಂಡಿಚೇರಿ ರಾಜ್ಯಗಳ 210 ಪ್ರತಿನಿಧಿಗಳು ಜನೇವರಿ 13 ರಿಂದ 15 ರವರೆಗೆ ತ್ರಿವೇಂಡ್ರಂನಲ್ಲಿ ಸೇರಿ ವಿದ್ಯುಚ್ಛಕ್ತಿ ಕೆಲಸಗಾರರ ಅಖಿಲ ಭಾರತ ಫೆಡರೇಶನ್ ಸ್ಥಾಪನೆ ಮಾಡಿದ್ದಾರೆ ಈ ಫೆಡರೇಶನಿಗೆ ಇ. ಬಾಲಾನಂದನ್ ಅಧ್ಯಕ್ಷರಾಗಿಯೂ, ತಮಿಳು ನಾಡಿನ ಜಾನಕಿ ರಾಮನ್ ಪ್ರಧಾನ ಕಾರ್ಯದರ್ಶಿಯಾಗಿಯೂ ಆಯ್ಕೆಯಾಗಿದ್ದಾರೆ.

ಸಿಐಟಿಯು ಅಧ್ಯಕ್ಷರಾದ ಬಿ ಟಿ. ರಣದಿವೆಯವರು ಸಮ್ಮೇಳನವನ್ನು ಉದ್ಘಾಟಿಸುತ್ತಾ, ವಿದ್ಯುಚ್ಛಕ್ತಿ ನೌಕರರ ಚಳುವಳಿಯಲ್ಲಿ ಈ ಸಮ್ಮೇಳನ ಚರಿತ್ರಾರ್ಹವಾಗಿದೆಂದೂ, ಸಮಾಜಕ್ಕೆ ಅತ್ಯಾವಶ್ಯಕ ಸೇವೆ ಸಲ್ಲಿಸುತ್ತಿದ್ದಾರೆ ವಿದ್ಯುಚ್ಛಕ್ತಿ ಕೆಲಸಗಾರರು, ಇವರ ಸೇವೆ, ಅತ್ಯಾವಶ್ಯಕವೆಂದು ಪರಿಗಣಿಸಿ, ಸರಕಾರ ಇವರಿಗೆ ಮುಷ್ಕರ ಹೂಡುವ ಹಕ್ಕನ್ನು ನಿರಾಕರಿಸಿದೆ. ಇವರನ್ನು ಪ್ರತ್ಯೇಕಿಸಿದೆ ಆದ್ದರಿಂದ ವಿದ್ಯುಚ್ಛಕ್ತಿ ಕೆಲಸಗಾರರು ಇತರ ಕಾರ್ಮಿಕರ ಜೊತೆಯಲ್ಲಿ ಸೇರುವುದಕ್ಕಾಗಿಯೂ, ಸರಕಾರದ ಕಾರ್ಮಿಕ ವಿರೋಧಿ ನೀತಿಯ ವಿರುದ್ಧವಾಗಿಯೂ ಹೋರಾಡಬೇಕೆಂದು ಕರೆ ಕೊಟ್ಟರು.

ವಿದ್ಯುಚ್ಛಕ್ತಿ ಆಡಳಿತೆ ಭ್ರಷ್ಟಾಚಾರದಿಂದ ತುಂಬಿರುವುದರಿಂದ, ಇದರ ಬದಲಾವಣೆಯಾಗ ಬೇಕಾದರೆ ಕಾರ್ಮಿಕರು ಆಡಳಿತೆಯಲ್ಲಿ ಪಾಲ್ಗೊಳ್ಳುವಂತಾಗಬೇಕೆಂದು ಬಿ.ಟಿ ಆರ್ ಹೇಳಿದರು.

ಸಮ್ಮೇಳನ ಸ್ವೀಕರಿಸಿದ ನಿರ್ಣಯಗಳಲ್ಲಿ ಬರೀ ಕಾರ್ಮಿಕರ ಆರ್ಥಿಕ ಬೇಡಿಕೆಗಳಷ್ಟೇ ಸೇರಿಕೊಂಡಿಲ್ಲ. ವಿದ್ಯುಚ್ಛಕ್ತಿಯ ಬೆಳವಣಿಗೆ, ಉತ್ಪಾದನೆ, ಸಂಶೋಧನೆಗಳ ಕುರಿತೂ ಚರ್ಚೆ ನಡೆಸಿ, ನಿರ್ಣಯ ಕೈಗೊಂಡಿದೆ. ವಿದ್ಯುಚ್ಛಕ್ತಿ ಉತ್ಪಾದನೆಯಲ್ಲಿ ನಮ್ಮ ದೇಶ ಅತಿ ಕೆಳ ಮಟ್ಟದಲ್ಲಿದೆ, ನಮ್ಮ ದೇಶ ಅಭಿವೃದ್ಧಿ ಗೊಳ್ಳುತ್ತಿಲ್ಲೆಂಬುದನ್ನು ಇದು ತೋರಿಸಿ ಕೊಡುತ್ತದೆ ಶೇ. 82 ರಷ್ಟು ಮನೆಗಳಿಗೆ ವಿದ್ಯುಚ್ಛಕ್ತಿ ಒದಗಿಸಬೇಕಾಗಿದೆ. ಪಂಚವಾರ್ಷಿಕ ಯೋಜನೆಗಳಲ್ಲಿಯ ಗುರಿ ಮುಟ್ಟಿಲ್ಲ. 6 ನೇ ಯೋಜನೆಯಲ್ಲಿ ಕೂಡ ಶೇ. 70 ಗುರಿ ಮುಟ್ಟುವುದು ಕಷ್ಟಕರ ಪ್ರಕೃತಿಯು ಕೊಡುಗೆಗಳನ್ನು ಮುಖ್ಯವಾಗಿ ನೀರಿನಿಂದ ವಿದ್ಯುತ್ ಉತ್ಪಾದನೆ ಮಾಡುವುದನ್ನು ಕಡೆ ಗಣಿಸಿರುವುದು ನಾಚಿಕೆ ಗೇಡು. ನಮ್ಮ ದೇಶದ ಪರಿಸ್ಥಿತಿಯನ್ನು ಪರಿಗಣಿಸದೆ ಸ್ಥಾಪನೆ ಮಾಡಿರುವ ಥರ್ಮಲ್ ಘಟಕಗಳು ಹಲವಾರು ಸಮಸ್ಯೆಗಳನ್ನೆದುರಿಸಬೇಕಾಗಿದೆ ವಿದೇಶಿ ತಂತ್ರಜ್ಞಾನದ ಮೇಲಿನ ಅವಲಂಬನೆಯಿಂದಾಗಿ ನಾವು ಹಿಂದೆ ಬಿದ್ದಿದ್ದೇವೆ. ಹಳೇ ಕಾಲದ ವಿದ್ಯುಚ್ಛಕ್ತಿ ಪೂರೈಕೆ ಕಾನೂನು ಬದಲಾಗ ಬೇಕು. ಅದರ ಆಧಾರದಲ್ಲಿ ನೇಮಿಸಲ್ಪಟ್ಟಿರುವ ಬೋರ್ಡುಗಳಲ್ಲಿ ಭ್ರಷ್ಟಾಚಾರ, ನೌಕರಶಾಹಿಗೆ ಪ್ರಸಿದ್ಧವಾಗಿವೆ. ಆದ್ದರಿಂದಲೇ ಈ ಕ್ಷೇತ್ರದಲ್ಲಿ ಇಂಥ ಗೊಂದಲ ಕಂಡು ಬರುತ್ತಿದೆ ಈ ಖಾತೆಯಲ್ಲಿ ದುಡಿಯುತ್ತಿರುವ 7 ಲಕ್ಷ ಕೆಲಸಗಾರರನ್ನು ಯಾವುದೇ ವಿಷಯದಲ್ಲಿ. ವಿಚಾರ ಮಾಡುತ್ತಿಲ್ಲ ವಿದ್ಯುಚ್ಛಕ್ತಿ ವಿಭಾಗದಲ್ಲಿ ಸುಧಾರಣೆಯಾಗ ಬೇಕಾದರೆ, ಉತ್ಪಾದನೆ ಹೆಚ್ಚಾಗ ಬೇಕಾದರೆ, ಕಾರ್ಮಿಕರೊಡನೆ ವಿಚಾರವಿನಿಮಯ ಅಗತ್ಯ ಕಾನೂನುಗಳಲ್ಲಿ ಬದಲಾವಣೆ ಅಗತ್ಯವೆಂದು ಪ್ರಥಮ ಸಮಾವೇಶ ಅಭಿಪ್ರಾಯ ವ್ಯಕ್ತ ಮಾಡಿದೆ. ಕರ್ನಾಟಕ ವಿದ್ಯುಚ್ಛಕ್ತಿ ಕೆಲಸಗಾರರೂ, ನೌಕರದಾರರೂ ಈ ಫೆಡರೇಶನಿನಲ್ಲಿ ಸೇರಿ ಕೊಳ್ಳ ಬೇಕಾದ್ದು ಅತ್ಯಗತ್ಯ.

ಐಕ್ಯರಂಗಕ್ಕೆ ಚಂದದಾರರಾಗಿರಿ.

ಶಿವಮೊಗ್ಗದಲ್ಲಿ

ವಿರೋಧ ಪಕ್ಷಗಳ ಸಭೆ

ತಾ|| 18-2-84 ನೇ ಶನಿವಾರ ಸಂಜೆ 6-00 ಗಂಟೆಗೆ ಶಿವಮೊಗ್ಗ ಗಾಂಧಿ ಮಂದಿರದಲ್ಲಿ ಜಿಲ್ಲೆಯ ವಿರೋಧ ಪಕ್ಷಗಳ ಸಭೆಯು ಜನತಾ ಪಕ್ಷದ ಅಧ್ಯಕ್ಷರಾದ ಶ್ರೀ ಮಾದಪ್ಪನವರ ಅಧ್ಯಕ್ಷತೆಯಲ್ಲಿ ಸೇರಿತು ಸಂಚಾಲಕ ಕಾ. ಚಂದುಕುಟ್ಟಿಯವರು ಎಲ್ಲರನ್ನೂ ಸ್ವಾಗತಿಸಿದರು ಈ ಸಭೆಯಲ್ಲಿ ಜನತಾ ಪಕ್ಷ ಕಾಂಗ್ರೆಸ್ (ಎಸ್) ಸಿ. ಪಿ ಐ (ಎಂ), ಸಿ. ಪಿ. ಐ. ಮುಂತಾದ ಪಕ್ಷಗಳ ಪ್ರತಿನಿಧಿಗಳು ಭಾಗವಹಿಸಿದ್ದರು.

ಕಾಂಗ್ರೆಸ್ (ಐ) ಕೇಂದ್ರ ಸರ್ಕಾರದ ಗುತ್ತೇದಾರಿ ಬಂಡವಾಳ ಶಾಹಿ

(8ನೇ ಪುಟ ನೋಡಿ)

ಬಂಡಾಯ ಪುನಶ್ಚೇತನ ಪಡೆಯಲಿ

— ಗಿರಿ

ಇತ್ತೀಚೆಗೆ ಕೋಲಾರದಲ್ಲಿ ರಾಜ್ಯ ಮಟ್ಟದನಾಲ್ಕನೇ ಬಂಡಾಯ ಸಾಹಿತ್ಯ ಸಮ್ಮೇಳನ ನಡೆಯಿತು 1979 ಮಾರ್ಚ್ 9 ಮತ್ತು 10 ರಂದು ಬೆಂಗಳೂರಿನಲ್ಲಿ ಕೆಲವು ಗೆಳೆಯರು ಪ್ರಥಮ ರಾಜ್ಯ ಸಮ್ಮೇಳನ ಕರೆಯುವ ಮೂಲಕ ಪ್ರಾರಂಭವಾದ ಬಂಡಾಯ ಸಾಹಿತ್ಯ ಸಂಘಟನೆ ಎರಡು ಮತ್ತು ಮೂರನೆ ರಾಜ್ಯ ಸಮ್ಮೇಳನಗಳನ್ನು ಬಿಜಾಪುರ ಮತ್ತು ರಾಯಚೂರಿನಲ್ಲಿ ನಡೆಸಿತ್ತು. ಈ ಮಧ್ಯೆ ಬೆಂಗಳೂರಿನಲ್ಲಿ ಸಾಹಿತ್ಯ ಶಿಬಿರ ಹಲವಾರು ಜಿಲ್ಲೆಗಳಲ್ಲಿ ಸಮ್ಮೇಳನ, ಚರ್ಚಾ ಗೋಷ್ಠಿ, ಕವಿಗೋಷ್ಠಿಗಳು ನಡೆದಿದ್ದವು.

"ಖಡ್ಗವಾಗಲಿ ಕಾವ್ಯ ಜನರ ನೋವಿಗೆ ಮಿಡಿವ ಪ್ರಾಣಮಿತ್ರ" ಎಂಬ ಕಹಳೆ ಊದಿ 'ಸಾಹಿತಿಗಳೇ ಭ್ರಮಾಲೋಕದಿಂದ ವಾಸ್ತವಕ್ಕೆ ಬನ್ನಿ' ಎಂಬ ಘೋಷಣೆ ಯೊಂದಿಗೆ ಸಂಘಟನೆ ಅಸ್ತಿತ್ವಕ್ಕೆ ಬಂದಿತು ಸ್ವಗತಿಯಲ್ಲಿ ನಿರತರಾಗಿದ್ದ ನವ್ಯ ಕಾವ್ಯದಿಂದ ಹಲವಾರು ಪ್ರಾಮಾಣಿಕ ಬರಹಗಾರರು ಸಿಡಿದೆದ್ದು ವ್ಯವಸ್ಥೆಯ ವಿರುದ್ಧ ಆಕ್ರೋಶ, ಸಿಟ್ಟು ವ್ಯಕ್ತಪಡಿಸುವ ಕೃತಿಗಳನ್ನು ಅಗಲೇರಚಿಸಲು ಪ್ರಾರಂಭಿಸಿದ್ದರು. ಇವರಿಗೆಲ್ಲ ನಿರ್ದಿಷ್ಟ ದಿಕ್ಕನ್ನು ತೋರಿಸುವ ಜವಾಬ್ದಾರಿ ಬಂಡಾಯ ಸಾಹಿತ್ಯ ಸಂಘಟನೆಯ ಮೇಲಿತ್ತು.

ವಾಸ್ತವತೆಯ ಘೋಷಣೆ ಕೊಟ್ಟು ಅದರ ಆಳಕ್ಕಿಳಿಯದ (ನಿರಂಜನ ಒಬ್ಬರನ್ನು ಬಿಟ್ಟು,) ಬರೀ ಬ್ರಾಹ್ಮಣ ವಿರೋಧಿಯಾದ ಒಕ್ಕೂಟ ಸಾಹಿತ್ಯ ಚಳವಳಿಯ ಅನುಭವಗಳು ಬಂಡಾಯದ ಬೆನ್ನಿಗಿದ್ದವು. ಈ ಅನುಭವಗಳ ಹಿನ್ನಲೆಯಲ್ಲಿ ಗಟ್ಟಿ ತಾತ್ವಿಕ ತಳಹದಿಯ ಸಂಘಟನೆಯಾಗುವ ಆಶಯವನ್ನು ಬಂಡಾಯ ವ್ಯಕ್ತಪಡಿಸಿತ್ತು ಧಾರ್ಮಿಕ ಕೇಂದ್ರವೊಂದರಲ್ಲಿ ಸಾಹಿತ್ಯ ಪರಿಷತ್‌ನ ಅದ್ಧೂರಿ ಮೆರವಣಿಗೆ ನಡೆದ ಸಂದರ್ಭದಲ್ಲಿ ಪರ್ಯಾಯವಾಗಿ ಈ ಪ್ರಥಮ ಸಮ್ಮೇಳನ ಏರ್ಪಡಿಸಿದ್ದರಿಂದ ಪರಿಷತ್‌ನಲ್ಲಿ ಸ್ಥಳ ಸಿಗದವರ ಗುಂಪು, ಇದೆಂದು ಕೆಲವರು ಕುಚೋದ್ಯವಾಡಿದ್ದರು ಇದು ಸಾಂದರ್ಭಿಕ ಪ್ರತಿಕ್ರಿಯೆಯಲ್ಲ ನಿರಂತರವೆಂಬುದನ್ನು ಸಾಬೀತುಪಡಿಸಿಕೊಳ್ಳಬೇಕಾದರೆ ವೈಯುಕ್ತಿಕ ತೆವಲುಗಳನ್ನು ಬದಿಗಿಡಬೇಕು ಸಾಮಾನ್ಯ ಜನತೆ ಸಮಾನತೆಗಾಗಿ ರಾಜಕೀಯ ಬದಲಾವಣೆಗೆ ನಡೆಸುವ ಹೋರಾಟದಲ್ಲಿ ಗುರ್ತಿಸಿಕೊಳ್ಳಬೇಕು ಎಂಬ ಆಶಯವನ್ನು ಸಂಘಟನೆ ಹೊಂದಿತ್ತು.

ಬಿಜಾಪುರ, ರಾಯಚೂರು ಸಮ್ಮೇಳನಗಳೂ, ಧಾರವಾಡ, ಮಡಿಕೇರಿ, ಕಾರವಾರ, ಬಳ್ಳಾರಿ, ಮುಂತಾದೆಡೆ ಜಿಲ್ಲಾ ಮಟ್ಟದಲ್ಲಿ ನಡೆದ ಚರ್ಚಾ, ಕವಿಗೋಷ್ಠಿಗಳು, ಬೆಂಗಳೂರಿನಲ್ಲಿ ನಡೆದ ಸಾಹಿತ್ಯ ಶಿಬಿರ ಈ ಆಶಯವನ್ನು ಗಟ್ಟಿಗೊಳಿಸುತ್ತ ನಡೆದಿದ್ದವು. ಈನಡುವೆ ಸಂಘಟನೆ ದಾರಿ ತಪ್ಪಿತ್ತು. ಎಲ್ಲ ಭಾಷೆಗಳು ಸಮಾನ ಎಂಬ ತಾತ್ವಿಕ ನಿಲುವು. ಮಾತೃಭಾಷೆ ಶಿಕ್ಷಣ ಮಾಧ್ಯಮ ಆಗಬೇಕು, ಕರ್ನಾಟಕದಲ್ಲಿ ಕನ್ನಡ ಆಡಳಿತ ಭಾಷೆಯಾಗ ಬೇಕು ಎಂಬ ಅಂತರ್ಗತ ನಿಲುವಿನ ಬಂಡಾಯ ಇದ್ದಾವುದನ್ನು ಹೇಳದ ಆದರೆ ಕನ್ನಡಕ್ಕೆ ಅಗ್ರಗಣ್ಯ ಸ್ಥಾನ ಎಂದು ಮಾತ್ರ ಪ್ರತಿ ಪಾದಿಸಿದ ಗೋಕಾಕ ವರದಿ ಬೆಂಬಲಿಸಿ ರಾಯಚೂರಿನಲ್ಲಿ ನಿರ್ಣಯ ತೆಗೆದುಕೊಂಡದ್ದು ತುಂಬಾ ವಿಷಾದಕರ ಇದನ್ನು ಪ್ರತಿಭಟಿಸಿ ಹಲವಾರು ಲೇಖಕರು ಬಂಡಾಯದಿಂದ ದೂರಸರಿದರು ಪರಿಷತ್ತಿನ ಕಾರ್ಯಕ್ರಮಗಳಿಗೆ ಮಾತ್ರ ಹೋಗಬಾರದು ಎಂಬ ವಿರೋಧಾಭಾಸದ ನಿಲುವು ಲೇಖಕರಿಗೆ ಮತ್ತು ಸಾರ್ವಜನಿಕರಿಗೆ ಅನುಮಾನ ಉಂಟಾಗುವಂತೆ ಮಾಡಿತು ರಾಯಚೂರು ಸಮ್ಮೇಳನವನ್ನು ಸಂಘಟಿಸುವಾಗ ಸಮುದಾಯ, ಎಸ್. ಎಫ್. ಐ ಮಹಿಳಾ ಸಂಘಟನೆಗಳು ಮುಂತಾದ ಪ್ರಗತಿಪರ ಸಂಘಟನೆಗಳನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದೆ ರಾಯಚೂರು ಸಂಘಟಕರು ಕಾಂಗ್ರೆಸ್ ಹಾಗೂ ಆರೆಸ್ಸೆಸ್‌ನವರ ನೆರವು ಪಡೆದದ್ದು ಕೋಲಾರ ಸಮ್ಮೇಳನದಲ್ಲಿ ಕಮ್ಯೂನಿಸ್ಟ್ ವಿರೋಧಿ ಭಾಷಣ, ಪುಸ್ತಕ ಪ್ರಚಾರ ಪ್ರಗತಿಪರ ಲೇಖಕರಲ್ಲಿ ಹಾಗೂ ಹೆಚ್ಚಾಗಿ ಸಾರ್ವಜನಿಕರಲ್ಲಿ ಸಂಘಟನೆ ಬಗ್ಗೆ ಅನುಮಾನ ಉಂಟುಮಾಡಿದವು

ಸಂಘಟನೆಯ ಶಿಸ್ತನ್ನು ಮುರಿಯುವ ಇಂತಹ ತಪ್ಪುಗಳನ್ನು ತಿದ್ದಿಕೊಂಡಾಗ ಕೋಲಾರದಲ್ಲಿ ಸಂಚಾಲಕರು ಹೇಳಿದ ಪುನಶ್ಚೇತನ ಸಮ್ಮೇಳನ ಸಾರ್ಥಕವಾದೀತು.

ಗೋಕಾಕ್ ವರದಿ ಬೆಂಬಲಿಸಿ ನಿರ್ಣಯ ಸ್ವೀಕರಿಸಿದ್ದ ಸಂಘಟನೆ ಕನಿಷ್ಠ ಪಕ್ಷ ಮೂರನೇ, ನಾಲ್ಕನೇ ದರ್ಜೆ ನೌಕರರಿಗೆ ಕನ್ನಡ ಕಲಿಯಲು ಸರ್ಕಾರ ನೀಡಿರುವ ಕಾಲಾವಕಾಶ ಬೆಂಬಲಿಸಿ ಬಹುಮತದ ನಿರ್ಣಯ ಸ್ವೀಕರಿಸಿದುದು ಸ್ವಾಗತಾರ್ಹ, ಅದೇ ರೀತಿ ಶಾಂತಿ ಚಳವಳಿ ಬೆಂಬಲಿಸಿ, ಅಭಿವ್ಯಕ್ತಿ ಸ್ವಾತಂತ್ರದ ಮೇಲಿನ ಹಲ್ಲೆ ಖಂಡಿಸಿ, ಸಂಸ್ಕೃತದ ಪ್ರಾಬಲ್ಯ ವಿರೋಧಿಸಿ ಬಹಳ ಮಹತ್ವದ ನಿರ್ಣಯಗಳನ್ನು ಸಮ್ಮೇಳನ ತಗೆದುಕೊಂಡಿರುವುದರಿಂದ ಕೆಲವು ತಪ್ಪುಗಳಿದ್ದಾಗ್ಯೂ ಸರಿಯಾದ ದಾರಿ ಹಿಡಿಯ ಬಹುದು ಎಂಬ ಭರವಸೆ ತಾಳಬಹುದು. ಪರಿಷತ್ತಿನ ಗೋಷ್ಠಿ ಸಮ್ಮೇಳನಗಳಿಗಿಂತ ಭಿನ್ನವಾದ ರೀತಿಯಲ್ಲಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿರುವುದೂ ಮಹತ್ವವಾದುದು. ಕೋಲಾರ ಸಮ್ಮೇಳನದ ಗೋಷ್ಠಿಗಳಲ್ಲಿ ಹಲವರ ಪ್ರಬಂಧಗಳು ಉಲ್ಲೇಖಾರ್ಹ. ದಲಿತ ಚಳವಳಿ ಕುರಿತು ಮಾತನಾಡಿದ ಎಲ್. ಹನುಮಂತಯ್ಯ ದಲಿತ ಸಂಘರ್ಷ ಸಮಿತಿಯೇ ರಾಜಕೀಯ ಪಕ್ಷವಾಗಿ ಬದಲಾವಣೆ ತರಲು ಸಾಧ್ಯವಿಲ್ಲ ದುಡಿಯುವ ವರ್ಗದ ನೇತೃತ್ವದ ರಾಜಕೀಯ ಪಕ್ಷಗಳಲ್ಲಿ ಪ್ರಮುಖ ಪ್ರವಾಹವಾಗಿ ಬೆರೆಯ ಬೇಕೆಂದರು.

ಅಧ್ಯಕ್ಷತೆ ವಹಿಸಿದ್ದ ಬಿ. ಕೃಷ್ಣಪ್ಪನವರು ಮಾತನಾಡಿ ದಲಿತ ಸಂಘರ್ಷ ಸಮಿತಿಗೆ ಯಾವುದೇ ಸಿದ್ಧಾಂತವಿಲ್ಲ ಈ ನೆಲದ ಸತ್ಯಗಳೇ ಆಧಾರ ಎಂದರು ಸಿದ್ಧಾಂತವೇ ಬೇಡ ಎನ್ನುವ ಕೃಷ್ಣಪ್ಪನವರು ಈ ನೆಲದ ಸತ್ಯಗಳನ್ನು ಪ್ರಗತಿಪರ ಸಿದ್ಧಾಂತದ ತಳಹದಿ ಮೇಲೆ ಪರಿಹಾರ ಪಡೆಯ ಬಯಸುತ್ತಾರೋ ಅಥವಾ ಪ್ರತಿಗಾಮಿ ಸಿದ್ಧಾಂತದ ತಳಹದಿ ಮೇಲೆ ಪರಿಹಾರ ಬಯಸುತ್ತಾರೋ ಅವರೇ ಉತ್ತರಿಸಬೇಕು.

ಬಂಡಾಯ ರಾಜಕೀಯವಾಗಿ ಭುಗಿಲೇಳ ಬೇಕೆಂದು ಸಾಹಿತ್ಯ ಪರಂಪರೆ ಮತ್ತು ಬಂಡಾಯ ಗೋಷ್ಠಿಯ ಅಧ್ಯಕ್ಷತೆವಹಿಸಿದ್ದ ಕ.ವೆಂ ರಾಜಗೋಪಾಲ್ ಕರೆಕೊಟ್ಟರು ಸಿ. ವಿ. ಪಾಟೀಲ್, ಶಿವಪ್ರಕಾಶ್, ಅರ್ಕ ಮಣಿಪಾಲ್, ಅವದಾನಿ ಮುಂತಾದವರೂ ಈ ಗೋಷ್ಠಿಯಲ್ಲಿ ಭಾಗವಹಿಸಿದ್ದರು

ಸಾಮಾಜಿಕ ಕ್ಷೇತ್ರದಲ್ಲಿ ಬದಲಾವಣೆ ಮಾಡಿ ರಾಜಕೀಯ ಬದಲಾವಣೆ ತರ್ತೀವಿ ಅಂದರೆ ಅದು ಅತಾರ್ಕಿಕವಾಗುತ್ತದೆ ಎಂದು ಸಂಸ್ಕೃತಿ ಮತ್ತು ರಾಜಕಾರಣದ ಗೋಷ್ಠಿ ಉದ್ಘಾಟಿಸಿದ ಜಿ ರಾಮಕೃಷ್ಣ ಅವರು ಹೇಳಿದರು ಅಧ್ಯಕ್ಷತೆವಹಿಸಿದ್ದ ಬಿ ಕೃಷ್ಣಮೂರ್ತಿ ಸಾಮ್ರಾಜ್ಯಶಾಹಿ ವ್ಯವಸ್ಥೆ ಬರಿ ಆರ್ಥಿಕ ವ್ಯವಸ್ಥೆಯಲ್ಲ ಅದೊಂದು ಸಂಸ್ಕೃತಿ ಎಂದರು.

ಪ್ರಚೋದಿಸುವ ಹಾಡು ನಾಟಕ ಬಂಡಾಯದಿಂದ ಬರಬೇಕೆಂದು ಪ್ರದರ್ಶಕ ಕಲೆಗಳು ಗೋಷ್ಠಿ ಉದ್ಘಾಟಿಸಿದ ಸಿ. ಜಿ ಕೃಷ್ಣಸ್ವಾಮಿ ಹೇಳಿದರು ಸಿನಿಮಾಗಳು ಬಂಡವಾಳ ಶಾಹಿಗಳ ಹಿಡಿತದಲ್ಲಿವೆ ಎಂದು ಚಂದ್ರಶೇಖರ ಆಲೂರು ಹೇಳಿದರೆ ರಂಗಾಶಿಡ್ಡಿಯವರು ಜನಪದ ಕಲೆಗಳ ಮುಖಾಂತರ ಪ್ರಗತಿಪರ ಆಶಯಗಳನ್ನು ಬಿತ್ತಬೇಕು ಎಂದರು.

ಕೆಳವರ್ಗದವರ ನೋವುಗಳಿಗೆ ಕಾವ್ಯ ಮಿಡಿಯ ಬೇಕೆಂದವರು ಕವಿಗೋಷ್ಠಿ ಅಧ್ಯಕ್ಷತೆ ವಹಿಸಿದ್ದ ಚೆನ್ನಣ್ಣ ವಾಲೀಕಾರ ಅವರು. ಕನ್ನಡ ಹೋರಾಟದ ಸ್ವರೂಪ ಎಂಬ ವಿಚಾರ ಗೋಷ್ಠಿಯನ್ನು ಬಿ ಟಿ. ಲಲಿತಾ ನಾಯಕ ಅವರು ಉದ್ಘಾಟಿಸಿದರು ಭಾಷೆಯನ್ನು ಇನ್ನೊಬ್ಬರ ಮೇಲೆ ಹೇರಬಾರದು ಎಂದ ಸಿ. ಯತಿರಾಜು ಅವರು ಎಲ್ಲಾ ಭಾಷೆಗಳು ಸಮಾನ ಎಂಬುವುದನ್ನು ತಾತ್ವಿಕವಾಗಿ ಒಪ್ಪಿಕೊಳ್ಳಬೇಕು ಎಂದು ಒತ್ತಿ ಹೇಳಿದರು. ಭಾರತದಲ್ಲಿ ಹಿಂದುಗಳಿಗೇ ಅಗ್ರಸ್ಥಾನ ಕರ್ನಾಟಕದಲ್ಲಿ ಕನ್ನಡಕ್ಕೆ ಅಗ್ರಸ್ಥಾನ ಎನ್ನುವ ಅರ್ಥದಲ್ಲಿ ವಾದ ಮಾಡುವವರಿಗೆ ಭಾಷೆಯ ಕುರಿತಾದ ಪ್ರಜಾಸತ್ತಾತ್ಮಕ, ವೈಜ್ಞಾನಿಕ ನಿಲುವು ತಾಳುವುದು ಸಾಧ್ಯವಾಗುವುದಿಲ್ಲ. ಬಸವರಾಜ ಸಬರದ, ಆರ್. ವಿ. ಭಂಡಾರಿ, ಜಿ. ಎಚ್ ರಾಘವೇಂದ್ರ ಅವರೂ ಮಾತನಾಡಿದರು. ಅಧ್ಯಕ್ಷತೆ ವಹಿಸಿದ್ದ ಕಾಳೇಗೌಡ ನಾಗವಾರರು ರಾಜಕುಮಾರ್ ನಾಯಕತ್ವ ವಹಿಸ ಬೇಕು ಎನ್ನುವ ಅರ್ಥದಲ್ಲಿ ಮಾತಾಡಿ ಗೊಂದಲ ಉಂಟು ಮಾಡಿದರು.

ಈ ಎಲ್ಲ ಗೊಂದಲ ವಿರೋಧಾಭಾಸಗಳನ್ನು ಮೀರಿ ಹೋದರೆ ಸಂಚಾಲಕರು ಹೇಳಿದ ಪುನಶ್ಚೇತನ ಸಾಧ್ಯವಾಗುವುದು.

ಸಮಾಜವಾದೀ ಜಗತ್ತು

ವಿಯಟ್ನಾಂ ಪ್ರಗತಿ ಪಥದಲ್ಲಿ

ಸಮಾಜವಾದಿ ಗಣರಾಜ್ಯ ವಿಯಟ್ನಾಂನ ಏಳನೇ ರಾಷ್ಟ್ರೀಯ ಸಭೆಯು ಇತ್ತೀಚೆಗೆ ಸೇರಿತ್ತು. 1984ರ ಸಾಮಾಜಿಕ ಆರ್ಥಿಕ ಸಾಧನೆ, ಯೋಜನೆ ಮತ್ತು 1985 ರಲ್ಲಿ ಸಾಧಿಸಬೇಕಾದ ಗುರಿಗಳನ್ನು ಕುರಿತ ಸಚಿವ ಮಂಡಲಿ ವರದಿಯನ್ನು ಸಚಿವ ಮಂಡಳಿಯ ಉಪಾಧ್ಯಕ್ಷ ಹಾಗೂ ಯೋಜನಾ ಆಯೋಗದ ಅಧ್ಯಕ್ಷ ವೊವಾನ್ ಕಿಯಟ್ ಅವರು ಮಂಡಿಸಿದರು.

ಕಳೆದ ಮೂರು ವರ್ಷಗಳಲ್ಲಿ (1981-83) ಸತತ ಯುದ್ಧದಿಂದ ಹಲವಾರು ತೊಂದರೆಗಳನ್ನು ಎದುರಿಸಿಯೂ ವಿಯಟ್ನಾಂನ ಆರ್ಥಿಕ ಪರಿಸ್ಥಿತಿ ಪ್ರಗತಿ ಪಥದಲ್ಲಿದ್ದು ಮುಂದಿನ ಅಭಿವೃದ್ಧಿಗೆ ಭದ್ರ ಬುನಾದಿಯನ್ನು ಹಾಕಿದೆ ಎಂದು ವರದಿ ಹೇಳುತ್ತದೆ.

ಕೃಷಿ ರಂಗದಲ್ಲಿ ಗಣನೀಯ ಪ್ರಗತಿ ಸಾಧಿಸಲಾಗಿದೆ, ಆಹಾರ ಉತ್ಪಾದನೆಯಲ್ಲಿ ವಾರ್ಷಿಕ ಸರಾಸರಿ ಒಂದು ಮಿಲಿಯ ಹೆಚ್ಚಿದೆ 1983 ರಲ್ಲಿ 3· 75 ಮಿಲಿಯ ಟನ್ ಆಹಾರ ಉತ್ಪಾದನೆಯಾಗಿದೆ. ಅಲ್ಲದೇ ಈ ವರ್ಷದಲ್ಲಿ ಪ್ರಥಮವಾಗಿ ಆಹಾರ ಆಮದು ಮಾಡಿಕೊಳ್ಳಲಿಲ್ಲ ಇದು 1982 ಕ್ಕಿಂತ 8 ಲಕ್ಷ ಟನ್ ಅಧಿಕ ಉತ್ಪಾದನೆಯಾಗಿದೆ. 1982ಕ್ಕೆ ಹೋಲಿಸಿದರೆ ಉಳಿದರಂಗಗಳಲ್ಲಿ ಸಹ ದಾಖಲೆ ಸ್ಥಾಪಿಸಲಾಗಿದೆ. ಹಂದಿಗಳು ಶೇಕಡಾ 3, ಎಮ್ಮೆಗಳು ಶೇಕಡಾ 3, ಹಸು ಮತ್ತು ಎತ್ತು ಶೇಕಡಾ 8 ರಷ್ಟು ಉತ್ಪಾದನೆ ಹೆಚ್ಚಾಗಿವೆ ಕೈಗಾರಿಕ ಬೆಳೆಗಳ ಉತ್ಪಾದನೆ ಶೇಕಡಾ 8ರಷ್ಟು ಹೆಚ್ಚಾಗಿದೆ ಸಮುದ್ರ ಮೀನುಗಳು ಯೋಜಿತ ಶೇಕಡಾ 12 ನ್ನು ಮೀರಿ ಮುಂದೆ ಹೋಗಿ ಶೇಕಡಾ 15 ರಷ್ಟು ತಲ್ಪಿವೆ.

ವರದಿಯ ಎರಡನೇ ಭಾಗದಲ್ಲಿ 84 ರ ಸಾಮಾಜಿಕ ಆರ್ಥಿಕ ಯೋಜನೆಯ ಮುಖ್ಯ ಉದ್ದೇಶ, ಕರ್ತವ್ಯಗಳನ್ನು ವಿಶದೀಕರಿಸಲಾಗಿದೆ 1985 ರಲ್ಲಿ ತಲುಪ ಬೇಕಾದ ಗುರಿಯನ್ನು ಸ್ಪಷ್ಟಪಡಿಸಲಾಗಿದೆ.

1981-85 ರ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಸಾಧಿಸಬೇಕಿದ್ದ ಗುರಿಯನ್ನು ಯಶಸ್ವಿಯಾಗಿ ಮುಗಿಸಲು 1984 ಮತ್ತು 1985 ಅತಿ ಮುಖ್ಯ ವರ್ಷಗಳು. ಇದೇ ವರ್ಷಗಳಲ್ಲಿ 1986-90 ರ ಅವಧಿಗೆ ಸಿದ್ಧತೆಗಳನ್ನು ಸಹ ಮಾಡಿ ಕೊಳ್ಳ ಬೇಕು ಎಂದೂ ವರದಿಯಲ್ಲಿ ಹೇಳಲಾಗಿದೆ.

ಈ ಎರಡು ವರ್ಷ ಕೃಷಿ ಉತ್ಪಾದನೆಯನ್ನು ಅಭಿವೃದ್ಧಿ ಪಡಿಸ ಬೇಕು. ಈಗಿರುವ ಭಾರೀ ಕೈಗಾರಿಕೆಗಳನ್ನು ಸದುಪಯೋಗಪಡಿಸಿಕೊಳ್ಳಬೇಕು. ಕೃಷಿ ಮತ್ತು ಸಣ್ಣ ಕೈಗಾರಿಕೆ ಅಭಿವೃದ್ಧಿಗೆ ಅವಶ್ಯವಾದ ಹೊಸ ಉದ್ದಿಮೆಗಳನ್ನು ಸ್ಥಾಪಿಸಿ ರಾಷ್ಟ್ರೀಯ ಕೈಗಾರಿಕ-ಕೃಷಿ ರಂಗವನ್ನು ಸ್ಥಾಪಿಸಲಾಗುವುದು ಎಂದು ಹೇಳಲಾಗಿದೆ. ವೈಜ್ಞಾನಿಕ, ತಾಂತ್ರಿಕ, ಸಾಂಸ್ಕೃತಿಕ, ಶೈಕ್ಷಣಿಕ ಮತ್ತು ಆರೋಗ್ಯ ಚಟುವಟಿಕೆಗಳನ್ನು ಮುಂದುವರಿಸಿ ಜನತೆಯ ಲೌಕಿಕ ಮತ್ತು ಸಾಂಸ್ಕೃತಿಕ ಜೀವನಕ್ಕೆ ಭದ್ರತೆ ಒದಗಿಸಿ ಭರವಸೆ ತುಂಬಲು ಶ್ರಮಿಸಬೇಕು ಎಂದು ಹೇಳಲಾಗಿದೆ

ಸಮೂಹ ಪದ್ಧತಿ ಮೂಲಕ ಕೃಷಿ ಉತ್ಪಾದನೆಯಲ್ಲಿ ಗಣನೀಯ ಪ್ರಗತಿ ಸಾಧಿಸಲಾಗಿದೆ ರೈತರು ವೈಯುಕ್ತಿಕವಾಗಿ ಹೆಕ್ಟೇರ್‌ಗೆ ಎರಡು ಟನ್

(ಕೊನೇ ಪುಟ ನೋಡಿ)

ಹೆಗಡೆ ಸರಕಾರದ ಮುಂಗಡ ಪತ್ರ

(1 ನೇ ಪುಟದಿಂದ)

ಗ್ರಾಮಾಂತರ ಪ್ರದೇಶದ ಜನರಿಗೆ ಒಳ್ಳೆ ಸಂಪರ್ಕ ಒದಗಿಸುವ ದೃಷ್ಟಿಯಿಂದ "ಹಳ್ಳಿ ಹೆದ್ದಾರಿ" ಕಾರ್ಯಕ್ರಮ, ನೀರು ಪೂರೈಕೆ ಕಾರ್ಯಕ್ರಮ, ಭೂ ಶಾಸನದನ್ವಯ ಭೂಮಿ ಕಳೆದು ಕೊಂಡವರಿಗೆ ರಾಷ್ಟ್ರೀಯ ಉಳಿತಾಯ ಸರ್ಟಿಫಿಕೇಟುಗಳ ಮೂಲಕ ಪರಿಹಾರಗಳೆಲ್ಲ ಸ್ವಾಗತಾರ್ಹ.

ವಿಚಾರ ಮಾಡಬೇಕಾದ ವಿಷಯ:-

ಡಿನೇಚರ್ಡ್ ಸ್ಪಿರಿಟ್, ಫೆನಿ ಮತ್ತು ಬೇರೆ ಮದ್ಯಗಳ ಮೇಲಿನ ಕರವನ್ನು ದೊಡ್ಡ ಪ್ರಮಾಣದಲ್ಲಿ ಇಳಿಸದೆ ಅದನ್ನು ಹೆಚ್ಚಿಸಿ ಆದಾಯ ಗಳಿಸಬಹುದಿತ್ತು.

ಅಕ್ಕಿ, ಗೋದಿ, ತೊಗರಿಬೇಳೆ, ಕಡ್ಲೆಬೇಳೆಗಳ ಮತ್ತು ಎಣ್ಣೆಯ ಮೇಲಿನ ಮಾರಾಟ ತೆರಿಗೆಯನ್ನು ಪೂರ್ಣ ರದ್ದು ಮಾಡುವುದು, ಸಾರ್ವಜನಿಕರು ಅಗತ್ಯವಾಗಿ ಉಪಯೋಗಿಸುವ, ರಿಫೈಂಡ್ ಎಣ್ಣೆ, ವನಸ್ಪತಿ, ಸಾಬೂನುಗಳ ಮಾರಾಟ ತೆರಿಗೆ ಹೆಚ್ಚಿಸಿದ್ದು, ಅದನ್ನು ಕಡಿಮೆ ಮಾಡುವುದು ಅತ್ಯಗತ್ಯ.

ಪ್ರಾಥಮಿಕ ಶಾಲೆಗಳ ಕಟ್ಟಡಕ್ಕಾಗಿ, ಹಿಂದುಳಿದವರ ಅಭಿವೃದ್ಧಿಗಾಗಿ ನಿರುದ್ಯೋಗ ನಿವಾರಣೆಗಾಗಿ ಉದ್ಯಮಗಳ ಸ್ಥಾಪನೆಗೆ, ವಿದ್ಯುಚ್ಛಕ್ತಿ ಪಂಪಸೆಟ್ಟಿಗೆ ಉಪಾಯ, ಗೃಹ ನಿರ್ಮಾಣ ಕಾರ್ಯ, ನೀರಾವರಿ ವಿಸ್ತರಣೆಗಾಗಿ ಕಾರ್ಯಕ್ರಮ, ನಿರುದ್ಯೋಗಿಗಳಿಗೆ ಪರಿಹಾರ, ಗ್ರಾಮಾಂತರ ಪ್ರದೇಶದ ಕೃಷಿ ಕಾರ್ಮಿಕರಿಗೆ, ಬಡ ರೈತರಿಗೆ ವೃದ್ಧಾಪ್ಯ ವೇತನ, ದಿನಗೂಲಿ ಕೆಲಸಗಾರರ ಸಮಸ್ಯೆ, ಸ್ಟೈಫೆಂಡರಿ, ಸ್ಥಳೀಯ ಪ್ರಾಥಮಿಕ ಶಿಕ್ಷಕರ, ನಿರ್ದಿಷ್ಟ ಸಂಬಳದಲ್ಲಿ ಕೆಲಸ ಮಾಡುವ ನೌಕರರ ಬೇಡಿಕೆಗಳ ಕುರಿತು ಹೆಗಡೆಯವರು ಏನೂ ಹೇಳಿಲ್ಲ.

ಸಾರಿಗೆ ಸಂಸ್ಥೆ, ವಿದ್ಯುಚ್ಛಕ್ತಿ, ಸರಕಾರಿ ಒಡೆತನದ ಕೈಗಾರಿಕೆಗಳ ಅಸಮರ್ಪಕ ಆಡಳಿತೆ, ಅವುಗಳಿಂದುಂಟಾಗುವ ಅಪಾರ ನಷ್ಟ. ಇವುಗಳಲ್ಲಿಯ ಸೋರುವಿಕೆಯನ್ನು ತಡೆಹಿಡಿಯಲು, ಆಡಳಿತೆಯನ್ನು ಸುಧಾರಿಸಲು ಕೈಗೊಂಡ ಕ್ರಮಗಳೂ ಬಜೆಟ್ ಭಾಷಣದಲ್ಲಿಲ್ಲ.

ಕೃಷಿ ಮತ್ತಿತರ ಕಾರ್ಮಿಕರ ಕನಿಷ್ಟ ವೇತನ ಹೆಚ್ಚಿಸುವ ನಿರ್ಣಯ ಸರಕಾರ ಕೈಗೊಂಡಿದ್ದರೂ, ಅದನ್ನು ಅನುಷ್ಠಾನದಲ್ಲಿ ತರುವ ವಿಧಾನ ಹೇಳಿಲ್ಲ. ಹಿಂದಿನ ಸಿ ಪಿ ಐ. (ಎಂ) ನೇತೃತ್ವದ ಕೇರಳ ಸರಕಾರದ ಕಾನೂನಿನಂತೆ, ಗ್ರಾಮಾಂತರ ಪ್ರದೇಶದ ಕೃಷಿ ಕಾರ್ಮಿಕರಿಗೆ ಮತ್ತು ಬಡ ರೈತರಿಗೆ ವೃದ್ಧಾಪ್ಯ ವೇತನ ಮಂಜೂರು ಮಾಡುವ ಗ್ರಾಮಾಂತರ ಪ್ರದೇಶದಲ್ಲಿ ಪಡಿತರ ಪದ್ಧತಿ ಅನುಷ್ಠಾನದಲ್ಲಿ ತರುವ ಅಂಶವೂ ಬಜೆಟ್ಟಿನಲ್ಲಿಲ್ಲ.

ಶೇಂದಿಯನ್ನು ಕಲಬೆರಕೆ ಮಾಡುವ ಪ್ರವೃತ್ತಿ ಬೆಳೆದು ಬಂದಿರುವುದರಿಂದ ಹಂತ ಹಂತವಾಗಿ ಶೇಂದಿ ಮಾರಾಟವನ್ನು ನಿಲ್ಲಿಸಲಾಗುವುದೆಂದು ಹೆಗಡೆಯವರು ಹೇಳಿರುವುದು ಅಪಾಯಕಾರಿ. ಹಾಗಾದಲ್ಲಿ ದಕ್ಷಿಣ ಕನ್ನಡ ಒಂದೇ ಜಿಲ್ಲೆಯಲ್ಲಿ ಲಕ್ಷಾವಧಿ ಈಳಿಗೇರರು ನಿರುದ್ಯೋಗಿಗಳಾಗುವ ಭೀತಿಯಿದೆ. ಕಲಬೆರಕೆಯನ್ನು ತಡೆಗಟ್ಟಲು ಕ್ರಮ ಕೈಕೊಳ್ಳಬೇಕಲ್ಲದೆ, ಶೇಂದಿ ಮಾರಾಟವನ್ನಲ್ಲ ಎಂದು ಹೇಳ ಬಯಸುತ್ತೇವೆ. ಈಗಿರುವ ಆಡಳಿತೆಯ ಪದ್ಧತಿಯಲ್ಲಿ ಸರಿಯಾಗಿ ಜನಹಿತ ಕಾರ್ಯಗಳಾಗುತ್ತಿಲ್ಲ. ಮುಂಗಡ ಪತ್ರಿಕೆಯಲ್ಲಿ ತೋರಿಸಲ್ಪಟ್ಟ ಮೊಬಲಗು ಖರ್ಚಾಗುತ್ತಿಲ್ಲ. ಆದ್ದರಿಂದ ಆಡಳಿತೆಯಲ್ಲಿ ಸುಧಾರಣೆ, ಭ್ರಷ್ಟಾಚಾರ ನಿವಾರಣೆ ಕುರಿತು ನಿರ್ದಿಷ್ಟ ನಿರೂಪಣೆ ಅತ್ಯಗತ್ಯ.

ವಿಯಟ್ನಾಂ ಪ್ರಗತಿ ಪಥದಲ್ಲಿ

(7 ನೇ ಪುಟ ದಿಂದ)

ಉತ್ಪಾದಿಸಿದ್ದರೆ ಸಮೂಹ ಉತ್ಪಾದನೆ ಮೂಲಕ ಹೆಕ್ಟೇರಿಗೆ ಶೇಕಡಾ 3·5 ರಷ್ಟು ಉತ್ಪಾದನೆಯಾಗಿದೆ. ಉತ್ಪಾದನಾ ಸಮೂಹ ಕೇಂದ್ರಗಳು ಶೇಕಡಾ 50 ರಷ್ಟು ಹೆಚ್ಚಾಗಿವೆ ವಿಯಟ್ನಾಂ ಈಶಾನ್ಯ ಪ್ರದೇಶಗಳು ಮತ್ತು ಮೆಕಾಂಗ್ ನದಿಯ ಪ್ರದೇಶದಲ್ಲಿ ಇಲ್ಲಿವರೆಗೆ 17, 720 ಉತ್ಪಾದನಾ ಸಮೂಹಗಳನ್ನು, 234 ಕೃಷಿ ಸಹಕಾರಗಳನ್ನು ರಚಿಸಲಾಗಿದೆ. ಇದರಿಂದ ಶೇಕಡಾ 40 ಭಾಗವನ್ನು ಕೃಷಿ ಸಮೂಹ ಪದ್ಧತಿಗೆ ಒಳಪಡಿಸಲಾಗಿದೆ. ಇದರಿಂದ ಹೊಸ ತಾಂತ್ರಿಕ ಪದ್ಧತಿ ಅಳವಡಿಸಿಕೊಳ್ಳಲಾಗಿದೆ ಉತ್ಪಾದನಾ ಸಮೂಹಗಳು ಜನತೆಯ ಶಿಕ್ಷಣ ಮತ್ತು ಆರೋಗ್ಯದ ಕಡೆಗೆ ವಿಶೇಷ ಗಮನಹರಿಸಿವೆ.

ವಿಧಾನ ಸಭೆಯಲ್ಲಿ

(ಕರ್ನಾಟಕ ವಿಧಾನಸಭೆಯ ಜಂಟೀ ಸಮಾವೇಶದಲ್ಲಿ ಗವರ್ನರ ಬ್ಯಾನರ್ಜಿಯವರು ಮಾಡಿದ ಭಾಷಣದ ಮೇಲೆ ಸಿ. ಪಿ ಐ (ಎಂ) ಶಾಸಕ ಸೂರ್ಯನಾರಾಯಣರಾವ್ ಅವರು ಮಾಡಿದ ಭಾಷಣದ ಕೆಲವಂಶಗಳನ್ನು ಪ್ರಕಟಿಸುತ್ತಿದ್ದೇವೆ)

ಮೂರು ಗಂಟೆಗಳ ಕಾಲ ವಿದ್ಯುಚ್ಛಕ್ತಿಯ ಕೊರತೆಯಿಂದಾಗಿ ಹೊರಗೆ ಹೋಗಬೇಕಾದ ಪ್ರಸಂಗ ಇರುತ್ತದೆ. ಆರುಗಂಟೆಗಳ ಕಾಲದವರೆಗೆ ಕೆಲಸವನ್ನು ಮಾಡುವುದಕ್ಕೆ ಆಗುವುದಿಲ್ಲ. ಅಷ್ಟು ಹೊತ್ತಿನಲ್ಲಿ ಮನೆಗಳಿಗೆ ಹೋಗಬೇಕೆಂದರೆ ಬಹಳ ತೊಂದರೆಯಾಗುತ್ತದೆ ಆದ್ದರಿಂದ ಮಾನ್ಯ ವಿದ್ಯುಚ್ಛಕ್ತಿ ಮಂತ್ರಿಗಳು ಸಣ್ಣ ಸಣ್ಣ ಕಾರ್ಖಾನೆಗಳವರಿಗೆ ಮೂರು ಘಂಟೆ ಆರು ಘಂಟೆಗಳ ಕಾಲ ವಿದ್ಯುಚ್ಛಕ್ತಿಯ ಸರಬರಾಜನ್ನು ಕಡಿಮೆ ಮಾಡುವ ಬದಲು ವಾರಕ್ಕೆ ಒಂದೇ ಒಂದು ದಿವಸ ಪೂರ್ಣ ವಿರಾಮವನ್ನು ಕೊಟ್ಟು ಐದು ದಿವಸಗಳ ಕೆಲಸ ಮಾಡುವಂಥ ಒಂದು ವ್ಯವಸ್ಥೆಯನ್ನು ಮಾಡುವುದಕ್ಕೆ ವಿಚಾರ ಮಾಡಬೇಕೆಂದು ಹೇಳುತ್ತೇನೆ.

ಇನ್ನು ಅನೇಕ ಜನ ನಮ್ಮ ಕಾಂಗ್ರೆಸ್ ಮಿತ್ರರು ಮಾತನಾಡುತ್ತಾ 20 ಅಂಶಗಳ ಕಾರ್ಯಕ್ರಮ ಕಾರ್ಯಗತ ಮಾಡಲಿಲ್ಲ. 20 ಅಂಶಗಳ ಕಾರ್ಯಕ್ರಮವನ್ನು ಮಾಡಿಬಿಟ್ಟರೆ ಎಲ್ಲ ಸರಿಯಾಗಿ ಹೋಗುತ್ತದೆ ಎನ್ನುವ ರೀತಿಯಲ್ಲಿ ಹೇಳಿದರು. 20 ಅಂಶ ಕಾರ್ಯಕ್ರಮದಲ್ಲಿ ಮೂಲಭೂತವಾಗಿ ಜನರಿಗೆ ಉದ್ಯೋಗವನ್ನು ಕೊಡತಕ್ಕಂಥ ವಿಚಾರವಾಗಲಿ, ಬಡರೈತರಿಗೆ ಜಮೀನು ಕೊಡತಕ್ಕಂಥ ವಿಚಾರವಾಗಲಿ ಯಾವುದನ್ನೂ ಹೇಳಲಿಲ್ಲ. 20 ಅಂಶ ಕಾರ್ಯಕ್ರಮದಿಂದ ನಮ್ಮ ದೇಶದ ಆರ್ಥಿಕ ಪರಿಸ್ಥಿತಿ ಸುಧಾರಿಸಲಿಕ್ಕೆ ಸಾಧ್ಯವೇ ಇಲ್ಲ. ಜನರಿಗೆ ಮಿಸ್ ಲೀಡ್ ಮಾಡುತ್ತಿದ್ದಾರೆ. ಕೆಲಸ ಮಾಡುವುದು ಮೂಲಭೂತವಾದ ಹಕ್ಕು ಎಂದು ಮಾಡಬೇಕು. ಆವಾಗ ದೇಶದಲ್ಲಿ ನಿರುದ್ಯೋಗ ಹೋಗಲಾಡಿಸುವುದಕ್ಕೆ ಸಾಧ್ಯವಾಗುತ್ತದೆ. ಕೆಲಸ ಮಾಡುವವರಿಗೆ ಪ್ರೋತ್ಸಾಹವನ್ನು ಕೊಡಬೇಕು. ದೇಶದಲ್ಲಿ ಹರಿಜನರಿಗೆ, ಗಿರಿಜನರಿಗೆ ಬಡವರಿಗೆ ಉದ್ಯೋಗಗಳನ್ನು ದೊರಕಿಸಿ ಕೊಟ್ಟು ನಿರುದ್ಯೋಗ ನಿರ್ಮೂಲನೆ ಮಾಡಬೇಕು ಎಂದು ನಾವು ಹೇಳುತ್ತೇವೆ. ನಮ್ಮ ದೇಶದಲ್ಲಿ ಈಗ ಏನಾಗಿದೆ ಎಂದರೆ ಆಸ್ತಿಗಾಗಿ ನಮ್ಮ ಹಕ್ಕು ಎನ್ನುವುದು ಮೂಲಭೂತ ಹಕ್ಕನ್ನಾಗಿ ಮಾಡಿದ್ದಾರೆ. ಪರಿಸ್ಥಿತಿ ಈ ರೀತಿಯಾಗಿರುತ್ತದೆ ನಮ್ಮ ಕಾಂಗ್ರೆಸ್ ಮಿತ್ರರನ್ನು ಕೇಳುತ್ತೇನೆ, ಈ ಒಂದು ವಿಚಾರದಲ್ಲಿ ಹೋರಾಟ ಮಾಡಿ ನಾನಾ ಕ್ಷೇತ್ರಗಳಲ್ಲಿ ಒಂದು ರೆಸಲ್ಯೂಷನ್ ಮಾಡಿ ಕೇಂದ್ರ ಸರ್ಕಾರಕ್ಕೆ ಕಳುಹಿಸಲಿಕ್ಕೆ ತಯಾರಾಗಿದ್ದೀರಿಯೇ ಎಂದು ಕೇಳುತ್ತಿದ್ದೇನೆ. ಈ ಪಶ್ಚಿಮ ಬಂಗಾಳದಲ್ಲಿ ನಮ್ಮ ಕರ್ನಾಟಕದಲ್ಲಿ ನಿರುದ್ಯೋಗಿಗಳಾಗಿ ಲಕ್ಷಾಂತರ ಜನರು ಇದ್ದಾರೆ ವೆಸ್ಟ್ ಬೆಂಗಾಲ್‌ನಲ್ಲಿ ಉದ್ಯೋಗ ಮೂಲಭೂತವಾದ ಹಕ್ಕು ಎಂದು ಹದಿಮೂರನೆ ತಾರೀಖಿನಿಂದ ತರುತ್ತಿದ್ದಾರೆ ಆದ್ದರಿಂದ ಕಳೆದ ಸದನದಲ್ಲಿ ಬಿ. ಡಿ. ಎ. ಬಗ್ಗೆ ಒಂದು ಶ್ವೇತ ಪತ್ರವನ್ನು ತರುತ್ತೇವೆಂದು ಹೇಳಿದ್ದರು ಇದನ್ನು ತರಬೇಕೆಂದು ಒತ್ತಾಯ ಮಾಡುತ್ತೇನೆ.

ಇನ್ನು ಭೂನ್ಯಾಯ ಮಂಡಲಿಗಳೆಂದು ಇದೆ. ಈ ಭೂ ನ್ಯಾಯ ಮಂಡಲಗಳಲ್ಲಿ ಗೇಣಿದಾರರಿಗೆ, ಬಡ ರೈತರಿಗೆ, ಹರಿಜನ ಗಿರಿಜನರಿಗೆ ಅನುಕೂಲವಾಗಬೇಕಾದರೆ ರೈತ ಸಂಘದ ಪ್ರತಿನಿಧಿಗಳನ್ನು ಹಾಕಬೇಕು. ಭೂನ್ಯಾಯ ಮಂಡಲಿಗಳಲ್ಲಿ ಲಕ್ಷಾಂತರ ಗೇಣಿದಾರರಿಗೆ ಬಹಳವಾಗಿ ಅನ್ಯಾಯವಾಗಿರುತ್ತದೆ. ಅದರಲ್ಲೂ ಹರಿಜನ ಗಿರಿಜನರಿಗೆ ಇರತಕ್ಕಂಥ ಭೂಮಿಯನ್ನು ಕಸಿದುಕೊಳ್ಳತಕ್ಕಂಥ ಪ್ರಯತ್ನಗಳು ಎಷ್ಟೋ ನಡೆದಿರುತ್ತದೆ. ಅದಕ್ಕಾಗಿಯೇ ಭೂನ್ಯಾಯ ಮಂಡಲಿ ಲ್ಯಾಂಡ್ ಗ್ರಾಂಟ್ ಕಮಿಷನ್ ಎಂದು ಮಾಡಿರುತ್ತಾರೆ. ಇದರಲ್ಲಿ ಬಡ ರೈತ ಜನರ ಪ್ರತಿನಿಧಿಗಳನ್ನು ಹಾಕಬೇಕು.

ಯಾವ ಸಂದರ್ಭದಲ್ಲಿಯಾದರೂ ಈ ಸರ್ಕಾರವನ್ನು ಕಬಳಿಸಬೇಕೆಂಬ ಒಂದು ಅನಿಶ್ಚಿತೆ ಇರುವುದರಿಂದ ಅಧಿಕಾರಿಗಳ ಮನಸ್ಸಿನಲ್ಲಿ ಒಂದು ರೀತಿಯಾದ ಮನೋಭಾವ ಉಂಟಾಗಿರುತ್ತದೆ. ಸರ್ಕಾರವನ್ನೇ ಕೇರ್ ಮಾಡದೆ ಇರತಕ್ಕಂಥ ಅನೇಕ ಜನ ಅಧಿಕಾರಿಗಳು ಇದ್ದಾರೆ ಆದ್ದರಿಂದ ಈ ಅನಿಶ್ಚಿತೆ ಹೋಗಬೇಕು ನಮ್ಮ ರಾಜ್ಯದಲ್ಲಿ ಕೆಲವು ಐ. ಎ. ಎಸ್. ಅಧಿಕಾರಿಗಳು ಇದ್ದಾರೆ ಶಾಸಕರು ಏನಾದರೂ ತಂದರೆ ಅದು ಅವರಿಗೆ ಹಿಡಿಸುವುದಿಲ್ಲ. ನಾವು ಯಾವುದಾದರೂ ವಿಚಾರವನ್ನು ತೆಗೆದು ಕೊಂಡು ಹೋದರೆ ಎಂ. ಎಲ್. ಎ. ಕರೆದುಕೊಂಡು ಬಂದುಬಿಟ್ಟರಾ. ಮಂತ್ರಿಗಳಹತ್ತಿರ ಹೇಳಿಸಿಬಿಟ್ಟರಾ ಎಂದು ಆಕ್ಷೇಪಣೆ ಮಾಡತಕ್ಕಂಥ ಐ ಎ. ಎಸ್ ಅಧಿಕಾರಿಗಳು ನಮ್ಮ ರಾಜ್ಯದಲ್ಲಿ ಇದ್ದಾರೆ. ಅವರುಗಳ ಹೆಸರನ್ನು ಹೇಳುವುದಕ್ಕೆ ಹೋಗುವುದಿಲ್ಲ. ಈ ಬ್ಯೂರೋಕ್ರಸಿ ಕಂಟ್ರೋಲ್ ಯಾವರೀತಿ ಇದೆ ಎಂದರೆ ದಂತಪೀಠದಲ್ಲಿ ಕುಳಿತು ನಿರ್ಣಯಗಳನ್ನು ತೆಗೆದು ಕೊಳ್ಳತಕ್ಕಂಥ ಕೆಲಸ ನಡೆಯುತ್ತಿದೆ. ಈ ಅಧಿಕಾರ ಮದ ಇರತಕ್ಕಂಥ ಬ್ಯೂರೋಕ್ರಸಿಯನ್ನು ಹತೋಟಿಗೆ ತರದೆ ಇದ್ದರೆ ಜನತಾ ಸರ್ಕಾರದವರು ಜನರಿಗೆ ಏನು ಹೇಳಿರುತ್ತಾರೆ ಆ ಕೆಲಸಗಳನ್ನು ಕಾರ್ಯಗತ ಮಾಡುವುದಕ್ಕೆ ಆಗುವುದಿಲ್ಲ.

ಹರಿಯಾಣ-ಪಂಜಾಬಿನ ಕುರಿತು ವಿರೋಧ ಪಕ್ಷಗಳ ಕರೆ

ಸಿ. ಪಿ. ಐ, (ಎಂ) ಸಿ. ಪಿ. ಐ, ಪುರೋಗಾಮಿ ಪಕ್ಷ, ಡಿ. ಎಸ್ ಪಿ. ಮೊದಲಾದ 8 ವಿರೋಧ ಪಕ್ಷಗಳು ದಿಲ್ಲಿಯಲ್ಲಿ ಸಭೆ ಸೇರಿ ಪಂಜಾಬ್-ಹರಿಯಾಣಗಳಲ್ಲಿ ಸತತವಾಗಿ ನಡೆಯುತ್ತಿರುವ ಕಗ್ಗೊಲೆ, ಹಿಂಸಾಚಾರಗಳನ್ನು ಖಂಡಿಸುತ್ತಾ ಜನತೆ ಇಂಥ ಕೃತ್ಯಗಳನ್ನು ದಮನಿಸಲು ಧೈರ್ಯದಿಂದ ಮುಂದೆ ಬರಬೇಕೆಂದೂ, ಕೇಂದ್ರ ಸರಕಾರ ಇಂಥ ಹತ್ಯಾಕಾಂಡವನ್ನು ಕೊನೆಗೊಳಿಸಲು, ಈ ಎರಡು ರಾಜ್ಯಗಳ ಸಮಸ್ಯೆಗಳ ಪರಿಹಾರಕ್ಕೆ ತುರ್ತು ಕ್ರಮ ಕೈ ಗೊಳ್ಳಬೇಕೆಂದೂ ಕರೆನೀಡಿವೆ

ಕರ್ನಾಟಕ ವಿಧಾನಸಭೆಯ ನಿರ್ಣಯ

ದೇಶದ ಸ್ವಾತಂತ್ರ್ಯ ಹೋರಾಟದಲ್ಲಿ ಚರಿತ್ರಾರ್ಹ ಪಾತ್ರ ವಹಿಸಿ ತ್ಯಾಗ ಬಲಿದಾನದಲ್ಲಿ ಹೆಸರುವಾಸಿಯಾದ ಪಂಜಾಬ್-ಹರಿಯಾಣಗಳು ಜಾತೀಯ ಮತೀಯ ಶಕ್ತಿಗಳ ಆಕ್ರೋಶಕ್ಕೆ ಬಲಿಯಾಗಿ ಪ್ರಾಣ ಆಸ್ತಿಗಳ ನಾಶಕ್ಕೆ ತುತ್ತಾಗಿ, ಈ ಎರಡು ರಾಜ್ಯಗಳಲ್ಲಿ ವಿಸ್ತಾರವಾಗಿ ಹಬ್ಬುತ್ತಿರುವ ಕೊಲೆ ಸುಲಿಗೆ, ಮತೀಯ ದ್ವೇಷ ಉತ್ತರ ಭಾರತವನ್ನೇ ಆವರಿಸುವ ಸಂಭವವಿರುವುದನ್ನನುಲಕ್ಷಿಸಿ, ಸ್ವಾತಂತ್ರ್ಯ ಸಂಗ್ರಾಮದಲ್ಲಿ ಮುಂಚೂಣಿಯಲ್ಲಿದ್ದ ಕರ್ನಾಟಕದ ಜನತೆ ಈ ಎರಡು ರಾಜ್ಯಗಳಲ್ಲಿ ನಡೆಯುತ್ತಿರುವ ದೊಂಬಿ, ಕೊಲೆಗಳ ಕುರಿತು ವಿಧಾನಸಭೆಯ ಮೂಲಕ ತನ್ನ ಅತೀವ ಚಿಂತೆ, ಕಾಳಜಿಯನ್ನು ವ್ಯಕ್ತ ಮಾಡಿದೆ.

ವಿರೋಧ ಪಕ್ಷಗಳ ಸಭೆ

(6 ನೇ ಪುಟ ದಿಂದ)

ಧೋರಣೆ ಮತ್ತು ಜನ ವಿರೋಧಿ ನೀತಿಯ ವಿರುದ್ಧ ರಾಷ್ಟ್ರ ವ್ಯಾಪಿ ಆಂದೋಲನ ಪ್ರಾರಂಭಿಸಬೇಕೆಂಬ ಉದ್ದೇಶದಿಂದ ಕಳೆದ ಜನವರಿಯಲ್ಲಿ ಕಲ್ಕತ್ತಾದಲ್ಲಿ ನಡೆದ ವಿರೋಧ ಪಕ್ಷಗಳ ಸಭೆಯ ನಿರ್ಣಯಗಳ ಬಗ್ಗೆ ಚರ್ಚೆ ನಡೆದು, ಸಭೆ ಅನುಮೋದಿಸಿತು. ಚರ್ಚೆಯಲ್ಲಿ ಶ್ರೀ ಮಾದಪ್ಪ ಕಾ. ಚಂದುಕಾಟೆ, ಶ್ರೀ ಜಿ ಎಸ್. ನಾಗರಾಜ್, ಶ್ರೀ ಕೆ. ನಿಂಗಯ್ಯ, ಕಾ. ವಿ. ಕೆ. ನಾಗೇಶ್, ಕಾ ಶಿವಶಂಕರ್ ಮುಂತಾದವರು ಭಾಗವಹಿಸಿದ್ದರು.

ತಾ॥ 17-2-84 ರಂದು ಭದ್ರಾವತಿ ಸಿ ಪಿ ಐ ಪಕ್ಷದ ಕಾರ್ಯಕರ್ತರಾದ ಕಾ. ವಿ. ಕೆ. ನಾಗೇಶ್‌ರವರ ಮೇಲೆ ಭದ್ರಾವತಿ ಪೋಲೀಸರು ಮಾಡಿದ ದೌರ್ಜನ್ಯವನ್ನು ವಿರೋಧ ಪಕ್ಷಗಳ ಈ ಸಭೆಯು ತೀವ್ರವಾಗಿ ಖಂಡಿಸಿತು

Printed & Publishedby P. Ramachandra Raoby him on behalf of the Communist Pary of India (Marxist) Karnataka State Committee, K. V. Temple Street, Sultanpet, Bangalore 560053 Editorial and managerial office, L 56, K V. Temple Street, Sultanpet. B-53. Phone : 24154
Editor : P. Ramachandra Rao